www.tungataranga.com ಶಿವಮೊಗ್ಗ ಜಿಲ್ಲೆಯ ಸಮಗ್ರ ಸುದ್ದಿಗಳ ಲೋಕ

# ತುಂಗಾ ತರಂಗ

ನಂ. 1

Tunga Taranga Kannada Daily

ಕನ್ನಡ ದಿನಪತ್ರಿಕೆ

web:tungataranga.com, Face Book Twiitter, Google+, Khoo, Instgram watsp: 94482 56183, 7483162573

ಸಂಪಾದಕ/ಪ್ರಕಾಶಕ: ಎಸ್.ಕೆ. ಗಜೇಂದ್ರಸ್ವಾಮಿ, ಸ್ಥಾಪಕ ಸಂಪಾದಕ: ಜೇವ್ಹಿಯರ್ ಡೇವಿಡ್, ವ್ಯವಸ್ಥಾಪಕ ಸಂಪಾದಕ: ಡಿ.ಬಿ. ವಿಜಯಕುಮಾರ್

ಸ್ಥಾಪನೆ: 1980, R.N.I. NO. 61997/1994 Reg. No. KA/SK/SMG-212 - 2021-23, www.tungataranga.blogspot.com, gajendraswamy2008@gmail.com, tungataranga@gmail.com,

Volume(ಸಂಪುಟ):43, Issue(ಸಂಚಿಕೆ):235 ಬಿಡಿಪ್ರತಿ: 01 ರೂ ಮಾಸಿಕ 30 ರೂ., ದಿನಾಂಕ: 08–03–2022, ಮಂಗಳವಾರ, Phone: 08182 401087, 9448256183

## ಕಾಂಗ್ರೆಸ್‌ನಿಂದ ಶ್ರಮಿಕ ಮಹಿಳೆಯರಿಗೆ ಸನ್ಮಾನ




ಶಿವಮೊಗ್ಗ,ಮಾ.8:

ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ಮಂಗಳವಾರ ಶಿವಮೊಗ್ಗ ನಗರದಲ್ಲಿ ಮಾಜಿ ಶಾಸಕ ಕೆ ಬಿ ಪ್ರಸನ್ನ ಕುಮಾರ್ ಅವರ ನೇತೃತ್ವದಲ್ಲಿ ಜಿಲ್ಲಾ ಮಹಿಳಾ ಕಾಂಗ್ರೆಸ್ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ಪೌರ ಕಾರ್ಮಿಕರಿಗೆ ಮತ್ತು ಬಿದಿ ಬದಿ ವ್ಯಾಪಾರ ನಡೆಸುತ್ತ ತಮ್ಮ ಜೀವನ ಕಟ್ಟಿಕೊಂಡಿರುವ ಶ್ರಮಿಕರಿಗೆ ಶಾಲು ಹೊದಿಸಿ ಸನ್ಮಾನಿಸಿ ಸೀರೆ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಆದ ಶ್ರೀಮತಿ ಅನಿತಾ ಕುಮಾರಿ, ಮಹಿಳಾ ಮುಖಂಡರುಗಳಾದ ಶ್ರೀಮತಿ ಸುವರ್ಣ ನಾಗರಾಜ್ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸುಂದರೇಶ್, ಪಾಲಿಕೆ ಸದಸ್ಯ ಯೋಗೀಶ್, ನಗರ ಪಾಲಿಕೆ ಮಾಜಿ ಸದಸ್ಯರಾದ ದೀಪಕ್ ಸಿಂಗ್ ಹಾಗೂ ಇನ್ನಿತರರು ಇದ್ದರು.

## ಶಿವಮೊಗ್ಗದಲ್ಲಿ ಆಯುಷ್ ವಿವಿ: ಡಾ.ರವಿರಾಜ್ ಹರ್ಷ

ಶಿವಮೊಗ್ಗ,ಮಾ.8:

ಶಿವಮೊಗ್ಗದಲ್ಲಿ ಆಯುಷ್ ವಿಶ್ವವಿದ್ಯಾಲಯ ಸ್ಥಾಪನೆಯಾಗುತ್ತಿರುವುದು ಸಂತೋಷದ ವಿಷಯವಾಗಿದೆ ಎಂದು ಜೈನ್‌ಆಸ್ಪತ್ರೆಯ ಡಾ.ರವಿರಾಜ್ ಹೇಳಿದ್ದಾರೆ. ಕರ್ನಾಟಕದಲ್ಲಿ ಸುಮಾರು 105 ಆಯುಷ್ ಕಾಲೇಜ್ ಗಳಿವೆ. ಆಯುಷ್ ವಿಶ್ವವಿದ್ಯಾಲಯದ ನಂತರ ಪಠ್ಯಕ್ರಮದ ವಿನ್ಯಾಸ ಮತ್ತು ಶಿಕ್ಷಣದ ಗುಣಮಟ್ಟ ಹೆಚ್ಚು ಸವಾಲಾಗಿದೆ. ಇಂತಹ ಸವಾಲಾಗಿ ಶಿವಮೊಗ್ಗದಲ್ಲಿ ಆರಂಭವಾಗುವ ಆಯುಷ್ ವಿವಿ ಉತ್ತರವಾಗಲಿದೆ. ಮತ್ತು ಗುಣಮಟ್ಟ ಕೂಡ ಹೆಚ್ಚಲಿದೆ.

– ಎರಡನೇ ಪುಟಕ್ಕೆ

ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಪ್ರೋ.ವೀಣಾ ಎಂ.ಕೆ. ಅಭಿಪ್ರಾಯ

# ಉತ್ತಮ ಶಿಕ್ಷಣ ವಿಚಾರ ವಿವೇಕ ಪಡೆದ ಮಹಿಳೆಯೇ ಸಬಲಳು

ಶಿವಮೊಗ್ಗ, ಮಾ.08:

ಉತ್ತಮ ಶಿಕ್ಷಣ, ವಿಚಾರ, ಮಾಹಿತಿ ಮತ್ತು ವಿವೇಕವನ್ನು ಪಡೆದ ಮಹಿಳೆಯೇ ಸಬಲಳು ಎಂದು ಸಹ್ಯಾದ್ರಿ ವಾಣಿಜ್ಯ ಕಾಲೇಜಿನ ಪ್ರಾಂಶು ಪಾಲರಾದ ಪ್ರೊ. ವೀಣಾ.ಎಂ.ಕೆ ಅಭಿಪ್ರಾಯ ಪಟ್ಟರು.

ಮಹಾನಗರಪಾಲಿಕೆ ವತಿಯಿಂದ ಇಂದು ಕುವೆಂಪು ರಂಗಮಂದಿರದಲ್ಲಿ ಏರ್ಪಡಿಸಲಾಗಿದ್ದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಅವರು ಮಾತನಾಡಿದರು.



ಜನ್ಮತಃ ಮಗು ಹೆಣ್ಣು ಅಥವಾ ಗಂಡು ಎಂಬ ಧೋರಣೆ ಇರುವುದಿಲ್ಲ. ಬದಲಾಗಿ ಮಗುವಿನ ಬೆಳವಣಿಗೆಯಲ್ಲಿ ಸಮಾಜ ಹೆಣ್ಣು, ಗಂಡು ಎಂದು ವರ್ಗೀಕರಿಸಿ ಬೆಳೆಸುತ್ತದೆ. ಸಮಾಜದ ಈ ಧೋರಣೆ ಬದಲಾಗಬೇಕು. ಪ್ರತಿಯೊಬ್ಬರಿಗೂ ತನ್ನದೇ ಆದ ಅಸ್ಮಿತೆ ಇರುತ್ತದೆ. ಹೆಣ್ಣು ತನ್ನ ಶಿಕ್ಷಣ, ಆಯ್ಕೆಗಳು, ಸ್ವಾತಂತ್ರ್ಯ, ಮತ್ತು ತನ್ನ ತೀರ್ಮಾನಗಳಿಂದ ಅದನ್ನು ಉಳಿಸಿಕೊಳ್ಳಬೇಕು. ಆಗ ಯಾರೂ ಕೂಡ ಹೆಣ್ಣನ್ನು ಕೀಳಾಗಿ ಕಾಣಲು ಸಾಧ್ಯವಿಲ್ಲ ಎಂದರು.

2022 ರ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಘೋಷವಾಕ್ಯ 'ಸುಸ್ಥಿರ ನಾಳೆಗಾಗಿ ಇಂದು ಲಿಂಗ ಸಮಾನತೆ' ಎಂಬುದಾಗಿದ್ದು ಲಿಂಗ ಅಸಮಾನತೆಯನ್ನು ಹೋಗಲಾಡಿಸುವ ನಿಟ್ಟಿನಲ್ಲಿ ದಿಟ್ಟ ಹೆಜ್ಜೆಗಳು ಇಡಬೇಕಿದೆ. ಹೆಣ್ಣು ಕಟ್ಟುಪಾಡುಗಳನ್ನು ಲೆಕ್ಕಿಸದೇ ಶಿಕ್ಷಣ, ವಿವೇಕದಿಂದ ತನ್ನತನ ಬೆಳೆಸಿಕೊಳ್ಳಬೇಕಿದೆ ಎಂದರು.

ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಪಾಲಿಕೆಯು ಸಾಮಾಜಿಕ ಸೇವೆ, ಆರೋಗ್ಯ ಮತ್ತು ಕ್ರೀಡಾ ಕ್ಷೇತ್ರದಲ್ಲಿ ಸಾಧನೆಗೈದ ಮಹಿಳೆಯರನ್ನು ಗುರುತಿಸಿ ಕೆಳದಿ ಚೆನ್ನಮ್ಮನ ಹೆಸರಿನಲ್ಲಿ ಪ್ರಶಸ್ತಿ ಪ್ರದಾನ ಮಾಡುತ್ತಿರುವುದು ಅತ್ಯಂತ ಸ್ತುತ್ಯಾರ್ಹ ಮತ್ತು ಅಭಿನಾಂದರ್ಹ ಕಾರ್ಯವಾಗಿದೆ ಎಂದರು.

ಮಂಜುಳಾ ಆಯನೂರು ಮಂಜುನಾಥ್ ಮಾತನಾಡಿದರು. ಅಡುಗೆ ಮನೆಯಿಂದ ಹಿಡಿದು ಮಿಲಿಟರಿ ಪಡೆವರೆಗೆ ಸಾಧನೆ ಮಾಡಿದ್ದಾಳೆ ಮಹಿಳೆ. ನಾವೇ ಆದಿಶಕ್ತಿ ಆಗಿದ್ದು, ಪುರುಷರು ನಮಗೆ ಶಕ್ತಿ ಮತ್ತು ಸ್ಪೂರ್ತಿಯನ್ನು ತುಂಬುವವರಾಗಿದ್ದಾರೆ.

ಪ್ರತಿಭಾ ಅರುಣ್ ಮಾತನಾಡಿ, ಸೃಷ್ಟಿಕರ್ತನ ಅಪರೂಪದ ಸೃಷ್ಟಿ ಹೆಣ್ಣು. ಹೆಣ್ಣು ಅತ್ಯಂತ ಶಕ್ತಿಯುತಳು, ಬೆಳಗಿನ ಜಾವ ಎದ್ದಾಗಿನಿಂದ ರಾತ್ರಿ ವಿಶ್ರಾಂತಿ ಪಡೆಯುವವರೆಗೆ ಅವಳದ್ದೇ ಅಧಿಕಾರ. ಅಂದರೆ ಮಕ್ಕಳ ಪಾಲನೆ, ಪೋಷಣೆ, ಗೃಹಕೃತ್ಯ ನಿರ್ವಹಣೆ ಸೇರಿದಂತೆ ಸರ್ವ ಕಾರ್ಯದಲ್ಲಿ ತೊಡಗಿರುತ್ತಾಳೆ.

ಕೆಳದಿ ಚೆನ್ನಮ್ಮ ಪ್ರಶಸ್ತಿ ಪ್ರದಾನ :ಮಹಿಳಾ ದಿನಾಚರಣೆ ಅಂಗವಾಗಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳೆಯ ರನ್ನು ಸನ್ಮಾನಿಸಿ ಗೌರವಿಸಲಾಯಿತು. (2ನೇ ಪುಟಕ್ಕೆ...)

## ಉಚಿತ ಯೋಗ ಶಿಬಿರ

ಶಿವಮೊಗ್ಗ,ಮಾ.8:

ನಗರದ ನಿಹಾರಿಕಾ ಯೋಗ ಕೇಂದ್ರದಿಂದ ಮಾ.15 ರಿಂದ 31 ರವರೆಗೆ ಪ್ರತಿದಿನ ಬೆಳಗ್ಗೆ 6–15 ರಿಂದ 7–15 ಗಂಟೆ ಮತ್ತು ಸಂಜೆ 5–30 ರಿಂದ 6–30 ರವರೆಗೆ ವರೆಗೆ 15 ದಿನಗಳ ಉಚಿತ ಯೋಗಾಸನ ತರಬೇತಿ ಶಿಬಿರವನ್ನು ಸಾರ್ವಜನಿಕರಿಗಾಗಿ ಆಯೋಜಿಸಲಾಗಿದೆ. ಬೊಜ್ಜು ನಿವಾರಣೆ,ಆರೊಗ್ಯಯುತ ಜೀವನ ಶೈಲಿ, ಮಾನಸಿಕ ಸ್ವಾಸ್ಥವನ್ನು ನಮ್ಮ ದೈನಂದಿನ ಜೀವನದಲ್ಲಿ ಅಳವಡಿಸುವ ಸಲುವಾಗಿ ಶಿಬಿರವನ್ನು ಏರ್ಪಡಿಸಲಾಗಿದೆ, ಆಸಕ್ತರು ಶಿಬಿರದ ಸದುಪಯೊಗ ಪಡೆದುಕೊಳ್ಳಬಹುದು ಎಂದು ಯೋಗತರಬೇತುದಾರರಾದ ರಾಜಶೇಖರ್ ಕೋರಿದ್ದಾರೆ. ಶಿಬಿರವು ಜಲ್ಸ್ ಫಿಟ್‌ನೆಶ್ ಸೆಂಟರ್, ನೂರು ಅಡಿ ರಸ್ತೆ (ನವ್ಯಶ್ರೀ ಎದುರು) ಶಿವಮೊಗ್ಗ ಇಲ್ಲಿ ನಡೆಯಲಿದೆ. ಆಸಕ್ತರು 9844457663/9901824699 ನಂಬರ್‌ಗಳಿಗೆ ಸಂಪರ್ಕಿಸಬಹುದು.

## ಪುರಂದರದಾಸರ ಹಾಗೂ ತ್ಯಾಗರಾಜ ಸ್ವಾಮಿಗಳ ಆರಾಧನೆ

ಶಿವಮೊಗ್ಗ,ಮಾ.8:

ನಗರದ ಗುರುಗುಹ ವಾಗ್ಗೇಯ ಪ್ರತಿಷ್ಠಾನ ಟ್ರಸ್ಟ್ ಹಾಗೂ ಗುರುಗುಹ ಸಂಗೀತ ಮಹಾವಿದ್ಯಾಲಯದಿಂದ ಮಾ.9 ರಿಂದ 13 ರವರೆಗೆ ಪುರಂದರ ದಾಸರ ಮತ್ತು ತ್ಯಾಗರಾಜ ಸ್ವಾಮಿಗಳ ಆರಾಧನಾ ಮಹೋತ್ಸವ ಕಾರ್ಯಕ್ರಮ ಆಯೋಜಿಸಲಾಗಿದೆ. ದೇವರನಾಮಗಳ ಗೋಷ್ಠಿ ಗಾಯನ, ಮಹಾವಿದ್ಯಾಲಯ ಶಿಕ್ಷಕಿಯರು ಮತ್ತು ಹಿರಿಯ ವಿದ್ಯಾರ್ಥಿಗಳಿಂದ ನವರತ್ನಮಾಲಿಕೆಗೋಷ್ಠಿ ಗಾಯನ, ದೇವರನಾಮಗಳ ಗೋಷ್ಠಿಗಾಯನ ಇತ್ಯಾದಿ ಕಾರ್ಯಕ್ರಮವಿದ್ದು, ಸಂಗೀತ ಪ್ರೇಮಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕೆಂದು ಆಯೋಜಕರು ಕೋರಿದ್ದಾರೆ.

## ಜೆ.ಪಿ.ಆರಾಧನ ಮೆಟರ್ನಿಟಿ ಆಸ್ಪತ್ರೆ ಉದ್ಘಾಟನೆ

ಶಿವಮೊಗ್ಗ,ಮಾ.8:

ನಗರದ ಗಾಂಧಿನಗರದಲ್ಲಿರುವ ಜೆ.ಪಿ.ಆರಾಧನ ಮೆಟರ್ನಿಟಿ ಸೆಂಟರ್ ಆಸ್ಪತ್ರೆ ಉದ್ಘಾಟನಾ ಸಮಾರಂಭ ಮಾ.10 ರಂದು ಬೆಳಗ್ಗೆ 11 ಗಂಟೆಗೆ ನಡೆಯಲಿದೆ. ಚಿತ್ರದುರ್ಗ ಮುರುಘಾಶರಣರು ಆಸ್ಪತ್ರೆಯನ್ನು ಲೋಕಾರ್ಪಣೆ ಮಾಡಲಿದ್ದಾರೆ. ಶ್ರೀಗಳ ಸಾನ್ನಿದ್ಯದಲ್ಲಿ ನಡೆಯುವ ಕಾರ್ಯಕ್ರಮಕ್ಕೆ ಮುಖ್ಯಅತಿಥಿಗಳಾಗಿ ವಿಧಾನ ಪರಿಷತ್ ಸದಸ್ಯ ಆಯನೂರು ಮಂಜುನಾಥ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಎಸ್.ಸುಂದರೇಶ್, ಡಿಎಚ್‌ಒ ಡಾ.ರಾಜೇಶ್ ಸುರಗಿಹಳ್ಳಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಂಜುನಾಥ್ ಡಿ ಆಗಮಿಸುವರು. ಆರಾಧನಾ ಆರ್ಥೋಪೆಡಿಕ್ ಸೆಂಟರ್ ಅಧ್ಯಕ್ಷ ಟಿ.ಕೃಷ್ಣಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕೆಂದು ಕೋರಲಾಗಿದೆ.

## ಅಂಬೇಡ್ಕರ್ ಶಾಲೆಗೆ ಅರ್ಜಿ ಆಹ್ವಾನ

ಶಿವಮೊಗ್ಗ,ಮಾ.8:

ನಗರದ ಅಂಬೇಡ್ಕರ್ ಪರಿಶಿಷ್ಟ ಜಾತಿ /ವರ್ಗದ ಬಾಲಕಿಯರ ವಸತಿ ಶಾಲೆಯ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಐದನೇ ತರಗತಿಗೆ ಪ್ರವೇಶವಿದ್ದು, ಉಚಿತ ವಸತಿ, ಊಟ ಮತ್ತು ಗುಣಮಟ್ಟದ ಶಿಕ್ಷಣ ಕ್ರೀಡಾ, ಸಾಂಸ್ಕೃತಿಕ ಚಟುವಟಿಕೆಗಳನ್ನು ಒಳಗೊಂಡ ಈ ಶಾಲೆಗೆ ಪ್ರವೇಶ ಪಡೆಯಲು ಅರ್ಜಿ ಸಲ್ಲಿಸಬಹುದು. ಮಾ.20 ರಂದು ಪ್ರವೇಶ ಪರೀಕ್ಷೆ ಇದ್ದು. ಪರಿಶಿಷ್ಟ ವರ್ಗ ದ ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಬಹುದು. ಹೆಚ್ಚಿನ ಮಾ:ಇತಿಗೆ 9448718996 ಈ ನಂಬರಿಗೆ ಸಂಪರ್ಕಿಸಬಹುದು.

## ಜೆಸಿಐ ಶಿವಮೊಗ್ಗ ಭಾವನದಿಂದ "ಮಡಿಲು" ಸೀಮಂತ




ಶಿವಮೊಗ್ಗ,ಮಾ.08:

ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಇಂದು ಜೆಸಿಐ ಶಿವಮೊಗ್ಗ ಭಾವನದ ವತಿಯಿಂದ ಜೆಸಿ ಶಾರದಾ ಶೇಷಗಿರಿ ಗೌಡ ರವರ ಅಧ್ಯಕ್ಷತೆಯಲ್ಲಿ "ಮಡಿಲು" ಶೀರ್ಷಿಕೆಯಡಿಯ ಸೀಮಂತ ಕಾರ್ಯಕ್ರಮವನ್ನು ಅನುಪಿನಕಟ್ಟೆಯ ಅಂಗನವಾಡಿ ಕೇಂದ್ರದಲ್ಲಿ ಆಯೋಜಿಸಲಾಗಿದೆ. ಅನುಪಿನಕಟ್ಟೆ ಗ್ರಾಮದ ಹದಿನೈದು ಗರ್ಭಿಣಿ ಮಹಿಳೆಯರಿಗೆ ಸೀಮಂತ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಪ್ರಪಂಚ ಎಷ್ಟೇ ಆಧುನಿಕತೆಯನ್ನು ಅನುಸರಿಸುತ್ತಿದ್ದರೂ ನಮ್ಮ ಸಂಪ್ರದಾಯಗಳನ್ನು ಇಂದಿಗೂ ನಾವು ಬಿಟ್ಟಿಲ್ಲ. ಅಂತಹ ಸಂಪ್ರದಾಯದಲ್ಲಿ ಒಂದು "ಮಡಿಲು " ಸೀಮಂತ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಅಧ್ಯಕ್ಷೆ ಶಾರದಾ ಶೇಷಗಿರಿಗೌಡ ತಿಳಿಸಿದರು.

ಇಂದಿನ ಒತ್ತಡದ ಬದುಕಿನ ಜಂಜಾಟಕ್ಕೆ ಹಾಗೂ ಮನೆಯ ತಾಪತ್ರಯಕ್ಕೆ ಸಿಲುಕಿ ಹಲವಾರು ಕಾರಣಗಳಿಂದ ಸೀಮಂತದ ಸವಿಕಾಣದ ಸಾಕಷ್ಟು ಗ್ರಾಮೀಣ ಹೆಣ್ಣು ಮಕ್ಕಳಿದ್ದಾರೆ. ಗ್ರಾಮೀಣ ಭಾಗದ ಗರ್ಭಿಣಿಯರಿಗೆ ತಾಯಿತನದ ಆಸೆ ಪೂರೈಸುವ ಸಂಪ್ರದಾಯದ ಸೀಮಂತ ಕಾರ್ಯಕ್ರಮವನ್ನು ಮಹಿಳಾ ದಿನಾಚರಣೆ ಯ ದಿವಸ ಮಾಡಿರುವುದು ನಮ್ಮ ಜೆಸಿಐ ಶಿವಮೊಗ್ಗ ಭಾವನಕ್ಕೆ ಅತ್ಯಂತ ತೃಪ್ತಿ ತಂದಿದೆ ಎಂದರು.

ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದಂತಹ ಸಾಧಕಿಯರಿಗೆ ಸನ್ಮಾನಿಲಾಯಿತು. ಕೋವಿಡ್ ನಂತಹ ಮಹಾಮಾರಿ ಸಂದರ್ಭದಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಅತಿ ಹೆಚ್ಚಿನ ಡೆಲಿವರಿ ಮಾಡಿದಂತಹ ಸರ್ಜಿ ಆಸ್ಪತ್ರೆಯ ಖ್ಯಾತ ಸ್ತ್ರೀರೋಗ ತಜ್ಞರು ಮತ್ತು ಪ್ರಸೂತಿ ತಜ್ಞರಾದ ಡಾ. ದ್ರಾಕ್ಷಾಯಿಣಿ, ಶಿವಮೊಗ್ಗ ತಾಲ್ಲೂಕು ಕ್ಷೇತ್ರ ಆರೋಗ್ಯ ಶಿಕ್ಷಣ ಅಧಿಕಾರಿ ಜೆಸಿ ಪ್ರತಿಮಾ ಡಾಕಪ್ಪ ಗೌಡ, ಸರ್ಜಿ ಹಾಸ್ಪಿಟಲ್ ನ ಮೆಟರ್ನಿಟಿ ಭಾಗದಲ್ಲಿ ಓಟಿ ಇಂಚಾರ್ಜ್ ಮತ್ತು ನರ್ಸಿಂಗ್ ಕೋ–ಆರ್ಡಿನೇಟರ್ ಶಾಂತ ಆರ್., ಫ್ರಂಟ್ಲೈನ್ ಕರೋನ ವಾರಿಯರ್ಸ್ ಆದ ಸರ್ಜಿ ಆಸ್ಪತ್ರೆಯ ಮೇರಿ ಸಿಸ್ಟರ್, ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡಿ ರುವಂತಹ ಅನುಪಿನಕಟ್ಟೆಯ ಆಶಾ ಶ್ರೀನಿವಾಸ್, ತಾಲೂಕು ಮಹಿಳಾ ಆರೋಗ್ಯ ಶಿಕ್ಷಣಾಧಿಕಾರಿ ರಜನಿಕುಮಾರಿರವರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು.


ಕಾರ್ಯಕ್ರಮದಲ್ಲಿಕಾರ್ಯದರ್ಶಿ ಜೆಸಿ ಪೂರ್ಣಿಮಾ, ಜೆಸಿ ಜಯಲಕ್ಷ್ಮಿ, ಜೆಸಿ ಲಲಿತಾ, ಜೆಸಿ ಶೋಭಾ, ಜೆಸಿ ಉಷಾ ಕುಲಕರ್ಣಿ, ಜೆಸಿ ಕನ್ನಿಕಾ, ಜೆಸಿ ಕರಿಬಸಮ್ಮ, ಜೆಸಿ ಕವಿತಾ, ನಾಗಮ್ಮ ಮತ್ತು ಆಶಾ ಕಾರ್ಯಕರ್ತೆಯರು ಹಾಗೂ ಅನುಪಿನಕಟ್ಟೆ ಯ ಗ್ರಾಮಸ್ಥರು ಭಾಗವಹಿಸಿದ್ದರು.

# ಎನ್‌ಇಎಸ್‌ ವಿಶೇಷ ಅಂಚೆ ಲಕೋಟೆ ಬಿಡುಗಡೆ

## ರಾಷ್ಟ್ರೀಯ ಶಿಕ್ಷಣ ಸಮಿತಿ 75 ನೇ ವರ್ಷದ ಅಮೃತ ಮಹೋತ್ಸವ ಸಂಭ್ರಮ

ಶಿವಮೊಗ್ಗ, ಮಾ.07:

ಸ್ವಾತಂತ್ರ್ಯ ಪೂರ್ವದಲ್ಲಿ ವಿದ್ಯಾ ಕ್ಷೇತ್ರಕ್ಕೆ ಖಾಸಗಿ ಭಾಗವಹಿಸುವಿಕೆಯ ಉದ್ದೇಶದಿಂದ ಸ್ಥಾಪನೆಗೊಂಡ ಪ್ರತಿಷ್ಠಿತ ರಾಷ್ಟ್ರೀಯ ಶಿಕ್ಷಣ ಸಮಿತಿಯು 75 ನೇ ವರ್ಷದ ಅಮೃತ ಮಹೋತ್ಸವದ ಸಂಭ್ರಮದಲ್ಲಿದ್ದು ಭಾರತೀಯ ಅಂಚೆ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಎನ್.ಇ.ಎಸ್ ವಿಶೇಷ ಅಂಚೆ ಲಕೋಟೆ ಬಿಡುಗಡೆ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಎನ್‌ಇಎಸ್ ಅಮೃತ ಮಹೋತ್ಸವ ಆಚರಣಾ ಸಮಿತಿ ಅಧ್ಯಕ್ಷರಾದ ಡಾ.ಪಿ. ನಾರಾಯಣ ತಿಳಿಸಿದರು.




ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಸ್ವಾತಂತ್ರ್ಯ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದ ಶಿವಮೊಗ್ಗ ಜಿಲ್ಲೆಯ ಹೋರಾಟಗಾರರು ಮಹಾತ್ಮ ಗಾಂಧೀಜಿಯವರ ಕರೆಗೆ ಮನ್ನಣೆ ನೀಡಿ 'ನಹೀ ಜ್ಞಾನೇನ ಸದೃಶ್ಯಂ' ಎಂಬ ಘೋಷ ವಾಕ್ಯದಡಿ 1946 ರಲ್ಲಿ ಸ್ಥಾಪನೆಗೊಂಡ ರಾಷ್ಟ್ರೀಯ ಶಿಕ್ಷಣ ಸಮಿತಿಯು ಮೊದಲ ಹಂತವಾಗಿ ರಾಷ್ಟ್ರೀಯ ಪ್ರೌಢ ಶಾಲೆಯನ್ನು ಪ್ರಾರಂಭಿಸಲಾಯಿತು. ಕರ್ನಾಟಕ ಸರ್ಕಾರದ ಕೃಷಿ ಸಚಿವರಾಗಿದ್ದ ದಿ||ಎಚ್.ಎಸ್.ರುದ್ರಪ್ಪನವರು ಸಂಸ್ಥೆಯ ಮೊದಲ ಸ್ಥಾಪಕ ಅಧ್ಯಕ್ಷರಾಗಿ ಮಹಾನ್ ದಾನಿಗಳಾಗಿದ್ದ ದಿ||ಹೆಚ್.ವೆಂಕಟಶಾಸ್ತ್ರೀಗಳು ಉಪಾಧ್ಯಕ್ಷರಾಗಿದ್ದರು. ದಿ||ಎಸ್.ವಿ. ಕೃಷ್ಣಮೂರ್ತಿರಾವ್ ಕಾರ್ಯದರ್ಶಿಗಳಾಗಿ ದಿ||ಎಸ್.ಆರ್.ನಾಗಪ್ಪಶೆಟ್ಟಿ ಸಹ ಕಾರ್ಯದರ್ಶಿಗಳಾಗಿ, ಹೆಚ್.ಲಿಂಗಪ್ಪ ಖಜಾಂಚಿಗಳಾಗಿ ಹಾಗೂ ಕಡಿದಾಳ್ ಮಂಜಪ್ಪ, ನರಸಿಂಹ ಕಾಮತ್, ಡಾ||ಕೆ.ಎನ್.ದತ್ತಾತ್ರಿ, ಜಯತೀರ್ಥಾಚಾರ್, ಡಿ.ಎಸ್.ದಿನಕರ್, ಹೆಚ್.ಸಿದ್ದಯ್ಯ, ಶ್ರೀನಿವಾಸ ಅಯ್ಯಂಗಾರ ಅವರುಗಳು ಕಾರ್ಯಕಾರಿ ಸಮಿತಿ ಸದಸ್ಯರಾಗಿ ಆಯ್ಕೆಯಾದರು. ಪ್ರಸ್ತುತ ಕಲೆ, ವಾಣಿಜ್ಯ, ವಿಜ್ಞಾನ, ಎಂಜಿನಿಯರಿಂಗ್, ಫಾರ್ಮಸಿ, ಕಾನೂನು, ಸಿಬಿಎಸ್‌ಸಿ, ಐಸಿಎಸ್‌ಸಿ, ಎಂ.ಬಿ.ಎ, ಎಂ.ಸಿ.ಎ ಸೇರಿದಂತೆ ಪ್ರಾಥಮಿಕ, ಪ್ರೌಢ, ಪಿ.ಯು.ಸಿ, ಪದವಿ, ಸ್ನಾತಕೋತ್ತರ ಪದವಿ ಶಿಕ್ಷಣದ 36 ವಿದ್ಯಾಲಯಗಳನ್ನು ಮುನ್ನಡೆಸಲಾಗುತ್ತಿದ್ದು ಮಲೆನಾಡಿನ ಶೈಕ್ಷಣಿಕ ಹೆಮ್ಮರವಾಗಿ ಬೆಳೆದು ನಿಂತಿದೆ. ಸರಿಸುಮಾರು 1500 ಕ್ಕೂ ಹೆಚ್ಚು ಸಿಬ್ಬಂದಿಗಳು, 14000 ಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿದ್ಯಾಭ್ಯಾಸ ನಡೆಸುತ್ತಿದ್ದಾರೆ. ಈ ಮೂಲಕ ಹಳ್ಳಿ ಹಳ್ಳಿಗಳಿಗೆ ಶಿಕ್ಷಣದ ಕ್ರಾಂತಿಯ ಕುರಿತ ಗಾಂಧೀಜಿಯವರ ಆಶಯವನ್ನು ಪೂರೈಸುವ ಸಾರ್ಥಕತೆಯ ಕೆಲಸವನ್ನು ರಾಷ್ಟ್ರೀಯ ಶಿಕ್ಷಣ ಸಮಿತಿ ನಡೆಸಿಕೊಂಡು ಬರುತ್ತಿದೆ. ಕಳೆದ 75 ವರ್ಷದಲ್ಲಿ ಲಕ್ಷಾಂತರ ವಿದ್ಯಾರ್ಥಿಗಳು ಎನ್.ಇ.ಎಸ್ ವಿವಿಧ ಸಂಸ್ಥೆಗಳಿಂದ ತಮ್ಮ ಜೀವನವನ್ನು ರೂಪಿಸಿಕೊಂಡಿದ್ದಾರೆ.

ಮಾ.10 ರಂದು ಸಂಜೆ 04:00 ಕ್ಕೆ ಎನ್.ಇ.ಎಸ್ ಕಾರ್ಯಾಲಯದ ಆವರಣದಲ್ಲಿ ವಿಶೇಷ ಅಂಚೆ ಲಕೋಟೆ ಬಿಡುಗಡೆ ಕಾರ್ಯಕ್ರಮ ಏರ್ಪಡಿಸಲಾಗಿದ್ದು ದಕ್ಷಿಣ ವಲಯ ಪೋಸ್ಟ್ ಮಾಸ್ಟರ್ ಜನರಲ್ ಡಿ.ಎಸ್.ವಿ.ಆರ್. ಮೂರ್ತಿ ಅಂಚೆ ಲಕೋಟೆ ಬಿಡುಗಡೆ ಮಾಡಲಿದ್ದಾರೆ. ಮೇಯರ್ ಸುನಿತಾ ಅಣ್ಣಪ್ಪ, ಶಿವಮೊಗ್ಗ ವಿಭಾಗ ಅಂಚೆ ಅಧಿಕ್ಷಕ ಜಿ.ಹರೀಶ್, ಉನ್ನತ ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕ ಅಶೋಕ.ಡಿ.ರೇವಣಕರ್, ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಎನ್.ಎಂ.ರಮೇಶ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ರಾಷ್ಟ್ರೀಯ ಶಿಕ್ಷಣ ಸಮಿತಿ ಅಧ್ಯಕ್ಷರಾದ ಎ.ಎಸ್. ವಿಶ್ವನಾಥ ಅಧ್ಯಕ್ಷತೆ ವಹಿಸಲಿದ್ದು ಉಪಾಧ್ಯಕ್ಷರಾದ ಟಿ.ಆರ್.ಅಶ್ವಥನಾರಾಯಣ ಶೆಟ್ಟಿ, ಕಾರ್ಯದರ್ಶಿಗಳಾದ ಎಸ್.ಎನ್.ನಾಗರಾಜ, ಸಹ ಕಾರ್ಯದರ್ಶಿಗಳಾದ ಡಿ.ಆರ್. ಅಮರೇಂದ್ರ ಕಿರೀಟಿ, ಖಜಾಂಚಿ ಸಿ.ಆರ್. ನಾಗರಾಜ ಅವರು ಉಪಸ್ಥಿತರಿರುವರು. ಇದೇ ವೇಳೆ ಮಾಸ ಪತ್ರಿಕೆ 'ರಾ.ಶಿ ಸಂಗತಿ' ಬಿಡುಗಡೆಗೊಳ್ಳಲಿದ್ದು ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಏರ್ಪಡಿಸಲಾಗಿದೆ.

ವರ್ಷವಿಡಿ ವಿಶೇಷ ಕಾರ್ಯಕ್ರಮ: (ಎರಡನೇ ಪುಟಕ್ಕೆ..)

## ಕೊನೆಯವರೆಗೂ ರೈತರಿಗೆ, ಪಕ್ಷಕ್ಕೆ ಋಣಿಯಾಗಿರುವೆ: ಪವಿತ್ರ ರಾಮಯ್ಯ



ಶಿವಮೊಗ್ಗ,ಮಾ.08:

ಕೊನೆ ಉಸಿರು ಇರುವವರೆಗೂ ರೈತರಿಗೆ ಹಾಗೂ ಪಕ್ಷಕ್ಕೆ ಋಣಿಯಾಗಿರುವೆ ಎಂದು ಕಾಡಾ ಅಧ್ಯಕ್ಷ ಪವಿತ್ರ ರಾಮಯ್ಯ ಅವರು ಹೇಳಿದರು.

ಅವರು ಇಂದು ಸ್ವಂತಃ ಖರ್ಚಿನಿಂದ ನಾಲೆಯ ಹೂಳು ತೆಗೆಸಿದ ಚಂದ್ರಶೇಖರ ಪೂಜಾರ್ ಅವರಿಗೆ ಏರ್ಪಡಿಸಿದ ಸನ್ಮಾನ ಸಮಾರಂಭದಲ್ಲಿ ಮಾತನಾಡಿದರು.

ಕೊರೊನಾ ಮಹಾಮಾರಿಯಿಂದ ಯಾವುದೇ ಅನುದಾನ ಬಿಡುಗಡೆಯಾಗದ ಕಾರಣ ಭದ್ರಾ ಅಚ್ಚುಕಟ್ಟು ವ್ಯಾಪ್ತಿಯಲ್ಲಿ ಸರಿಯಾದ ಕೆಲಸ ಹಾಗೂ ಕಾಮಗಾರಿಗಳನ್ನು ಮಾಡಲಾಗುತ್ತಿಲ್ಲ. ಮುಂದಿನ ದಿನಗಳಲ್ಲಿ ಸರ್ಕಾರದಿಂದ ಅನುದಾನ ಬಿಡುಗಡೆ ಮಾಡುವುದಾಗಿ ಭರವಸೆ ನೀಡಿದ್ದಾರೆ ಎಂದರು.

ಇಂದಿನ ಸಮಾಜದಲ್ಲಿ ತಮಗೇನು ಲಾಭ ಸಿಗುತ್ತದೆ ಎಂಬುವವರ ಮಧ್ಯದಲ್ಲಿ ಚಂದ್ರಶೇಖರ್ ಪೂಜಾರ್ ಎಂಬುವವರು ಶಿವಮೊಗ್ಗ ಹರಿಹರ ಮುಖ್ಯ ರಸ್ತೆಯಿಂದ ಡಿ.ಬಿ ಕೆರೆ ಡ್ಯಾಂನವರೆಗಿನ ಸುಮಾರು ಒಂಭತ್ತು ಕಿ.ಲೋ.ಮೀಟರ್ ನಾಲೆಯ ಹೂಳನ್ನು ಸ್ವತಃ ಖರ್ಚಿನಿಂದ ತೆಗೆಸಿರುವುದು ಹೆಮ್ಮೆಯ ಸಂಗತಿ ಎಂದರು.

ಈ ಸಂದರ್ಭದಲ್ಲಿ ಕಬ್ಬು ಬೆಳೆಗಾರರ ಸಂಘದ ಉಪಾಧ್ಯಕ್ಷ ತೇಜಸ್ವಿ ಪಾಟೀಲ್, ಗ್ರಾಮ ಪಂಚಾಯತಿ ಅಧ್ಯಕ್ಷೆ ಗೀತಾ ಪರಶುರಾಮ್ ಹಾಗೂ ರೈತ ಮುಖಂಡರು ಭಾಗವಹಿಸಿದ್ದರು.

## ಪಿಂಚಣಿ ಸಪ್ತಾಹ ಕಾರ್ಯಕ್ರಮ

ಶಿವಮೊಗ್ಗ, ಮಾ.08:

ಕಾರ್ಮಿಕ ಇಲಾಖೆಯಿಂದ ಕೇಂದ್ರ ಸರ್ಕಾರದ ಯೋಜನೆಗಳಾದ ಪ್ರಧಾನಮಂತ್ರಿ ಶ್ರಮಯೋಗಿ ಮಾನ್ ಧನ್ ಯೋಜನೆ ಎನ್.ಪಿ.ಎಸ್. ಹಾಗೂ ಎನ್.ಪಿ.ಎನ್. ಟ್ರೇಡರ್ಸ್ ಯೋಜನೆಗಳಡಿ ನೋಂದಣಿಗೆ ಮಾರ್ಚ್–07 ರಿಂದ 15ರವರೆಗೆ ಪಿಂಚಣಿ ಸಪ್ತಾಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಗೃಹ ಆಧಾರಿತ ಕಾರ್ಮಿಕರು, ಬೀದಿಬದಿ ವ್ಯಾಪಾರಿಗಳು, ಬಿಸಿ ಊಟ ಸಿದ್ಧಪಡಿಸುವವರು, ಹಮಾ ಲಿಗಳು, ಇಟ್ಟಿಗೆ ಭಟ್ಟಿಕಾರ್ಮಿಕರು, ಚಮ್ಮಾರರು, ಚಿಂದಿ ಆಯುವವರು, ಮನೆ ಕೆಲಸದವರು, ಅಗಸರು, ರಿಕ್ಷಾ ಚಾಲಕರು, ಭೂ ರಹಿತಾ ಕಾರ್ಮಿಕರು, ಧ್ವನಿ ಮತ್ತು ದೃಶ್ಯ ಕಾರ್ಮಿಕರು ಮತ್ತು ಇತರೆ ವೃತ್ತಿ ನಿರ್ವಹಿಸು ತ್ತಿರುವ ಅಸಂಘಟಿತ ಕಾರ್ಮಿಕರು ನೋಂದಾಯಿಸಿಕೊಳ್ಳಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಕಾರ್ಮಿಕ ಅಧಿಕಾರಿಗಳ ಕಚೇರಿ, ದೂ.ಸಂ.: 08182–248940 ನ್ನು ಸಂಪರ್ಕಿಸುವುದು.



ತುಂಗಾ ತರಂಗ
ಪುಟ 2
ಮಂಗಳವಾರ, ಮಾರ್ಚ್ 08, 2022
facebook/ Tunga Taranga Gajendra Swamy
twitter/ TarangaTunga

ಹೆತ್ತು ಹೊತ್ತು ಸಾಕಿ ಸಲಹುವವಳು ಮಹಿಳೆ. ಅಕ್ಕ, ತಂಗಿ, ಪುತ್ರಿ, ಪತ್ನಿಯಾಗಿ ಜೀವನ ತುಂಬುವವಳು ಆಕೆ. ಇಂತಹ ಮಹಿಳೆಗೆ ಜಗತ್ತಿನಲ್ಲಿ ಅಪಾರ ಸ್ಥಾನವಿದೆ. ಇದನ್ನು ನೆನಪಿಸಿಕೊಡುವಂತ ಅಂತಾರಾಷ್ಟ್ರೀಯ ಮಹಿಳಾ ದಿನ ಆಚರಿಸಲಾಗುತ್ತದೆ.

Happy Women's Day

# ಹಣದ ಸತಿ

ಒಂದು ಮನೆಯಿಂದ ಇನ್ನೊಂದು ಮನೆಗೆ ಬಾಳಿನ ಜ್ಯೋತಿಯಾಗಿ ಮನೆ ಬೆಳಗಲು ಕೇಳಿದಷ್ಟು ಹಣವನ್ನು ಕೊಟ್ಟು ಪತಿಗೆ ಸತಿಯಾಗಬೇಕೆ ?

ಇದ್ದ ಹಣ ಬ್ಯಾಂಕಿಗೆ ಜಮವಾದಂತೆ ಮಾಂಗಲ್ಯ ಕಟ್ಟುವ ಮೊದಲು ವರನಿಗೆ ವರದಕ್ಷಿಣೆ ಜಮವಾಗಬೇಕೆ ?

ಸಾವನಪ್ಪುವವರಿಗೂ ಸಂಸಾರದಲ್ಲಿ ಸಾಸಿವೆಕಾಳಷ್ಟು ಸಂಶಯಬಾರದಂತೆ ಬಾಳಬೇಕು, ಇವರ ಇಚ್ಛೆಯಂತೆ ಕೈಗೊಂಬೆಯಾಗಿರಬೇಕು.

ವರದಕ್ಷಿಣೆ ವರನಿಗೆ ವರುಷದೊಳಗೆ ತೀರಿಸದಿದ್ದರೆ ಸೀಮೆ ಎಣ್ಣೆಯು ತಲೆಗೆ ಅಭಿಷೇಕವಾಗುವುದು ,ಬೆಂಕಿ ಕಡ್ಡಿ ಉಜ್ಜಿ ದೇಹಕ್ಕೆ ಹಚ್ಚಿದರೆ ದೇಹವು ದೀವಿಟಗಿಯಂತೆ ಧಗ–ಧಗ ಉರಿಯುವುದು

ಕ್ಷಣಿಕ ಸುಖ ಕೊಡುವಾಗ
ಕಲ್ಲು ಬಂಡೆಯಂತೆ ನನ್ನನ್ನೆ ನಾ ಮರೆತಿರಬೇಕು
ಗಂಜಿ ಕುಡಿದು ಜೀವನ ಸಾಗಿಸುವುದು ಬಂದರ ಬಂಜೆತನ ಜೀವನ ಬರಬಾರದು,
ಬಂದರೆ ಬಂಜೆತನದ ಜೀವನ ನೋವಿನಲ್ಲಿ ಬೆಂದು ಹೋಗುವುದು ಬಟನ್ ಒತ್ತಿದ ಯಂತ್ರದಂತೆ ಅವರು ಇಚ್ಛಿಸಿದ ಮಗುವನ್ನು ಹೆತ್ತುಕೊಡಬೇಕು
ನಾನು ಮನಬಿಚ್ಚಿ ಇರುವಾಗ

ಅವರು ಕರೆದಾಗಲೆಲ್ಲಾ ರೆಕ್ಕೆ ಮುರಿದ ಹಕ್ಕಿಯಂತೆ ಜೊತೆಗಿರಬೇಕು. ಸೌಂದರ್ಯಕ್ಕೆ ಬೆರಗಾಗಿ ಮೋಹಕ್ಕೆ ಮರುಳಾಗಿ ದೇಹ ಮೆಟ್ಟಿದರೂ ಮುನಿದಂತೆ ಇರಬೇಕು ಅಂದವನ್ನು ಕೊಟ್ಟು ಅಂಧದಿಂದ ಅಂಧಳಾಗಬೇಕು
ತುತ್ತು ಕೂಳಿಗೂ ಪರದಾಟ ಬಂದಾಗ
ಹಂಗಿಸಿ ಹತ್ತು ಮಾತುಗಳನ್ನಾಡುವಾಗ ಹೊತ್ತು ನೋಡಿ ಕಾಲ ಕಳೆಯಬೇಕು.



ಶಂಕರ ಸಿ ಬಡಿಗೇರ
(ಕವಿ& ಪತ್ರಕರ್ತರು)
9986823807

# ತಂತ್ರಜ್ಞಾನ ಆಧಾರಿತವಾಗಿ ಭಾಷೆಯ ಬೆಳವಣಿಗೆ ಅಗತ್ಯ: ಡಿ.ಮಂಜುನಾಥ್



ಶಿವಮೊಗ್ಗ.ಮಾ.08:
ವೇಗವಾಗಿ ಬೆಳೆಯುತ್ತಿರುವ ತಂತ್ರಜ್ಞಾನಗಳನ್ನು ಆಧಾರವಾಗಿ ಇಟ್ಟುಕೊಂಡು ನಮ್ಮ ಮಾತೃಭಾಷೆಯ ಬೆಳವಣಿಗೆ ಮಾಡಬೇಕಾಗಿದೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷರಾದ ಡಿ. ಮಂಜುನಾಥ ಹೇಳಿದರು

ರಾಗಿಗುಡ್ಡದಲ್ಲಿರುವ ಡಾ. ಬಿ. ಆರ್. ಅಂಬೇಡ್ಕರ್ ಪರಿಶಿಷ್ಟ ಜಾತಿ ಮತ್ತು ವರ್ಗಗಳ ಪ್ರತಿಭಾನ್ವಿತ ಬಾಲಕಿಯರ ವಸತಿ ಶಾಲೆಯ ಸಹಯೋಗದಲ್ಲಿ ಶಿವಮೊಗ್ಗ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು ಏರ್ಪಡಿಸಿದ್ದ ವಿಶ್ವ ಮಾತೃಭಾಷಾ ದಿನಾಚರಣೆ ಮತ್ತು ಸಿರಿ ಕನ್ನಡ ವಿದ್ಯಾರ್ಥಿಗಳ ಕೈ ಬರಹದ ಕೃತಿ ಸಂಪುಟ ಬಿಡುಗಡೆ ಕಾರ್ಯಕ್ರಮ ಉದ್ದೇಶಿಸಿ ಅವರು ಮಾತನಾಡಿದರು.

ಮಾತೃಭಾಷೆ ಮತ್ತು ಪರಿಸರದ ಭಾಷೆಯನ್ನು ಉಳಿಸಿ ಬೆಳಸಬೇಕಾದದ್ದು ಎಲ್ಲರ ಜವಾಬ್ದಾರಿ. ವೇಗವಾಗಿ ಬೆಳೆಯುತ್ತಿರುವ ತಂತ್ರಜ್ಞಾನಗಳಿಗೆ ಹೊಂದಿಕೊಂಡು ನಮ್ಮ ಭಾಷೆಗಳನ್ನು ಉಳಿಸಿಕೊಳ್ಳುವ ಬದ್ಧತೆಯನ್ನು ನಾವು ತೋರಬೇಕಿದೆ ಎಂದು ಹೇಳಿದರು.

ಪ್ರಭಾ ಆರ್. ಪ್ರಸನ್ನಕುಮಾರ್ ದೀಪ ಬೆಳಗಿಸಿ ಉದ್ಘಾಟಿಸಿದರು. ತಾ.ಕ.ಸಾ.ಪ ಅಧ್ಯಕ್ಷರಾದ ಮಹಾದೇವಿ ಅಧ್ಯಕ್ಷತೆ ವಹಿಸಿದ್ದರು. ಡಾ. ಸವಿತಾ ರಘುನಂದನ್, ಸಂಸ್ಥೆಯ ಪ್ರಾಂಶುಪಾಲರಾದ ಸುಜಾತ, ತಾ.ಕ.ಸಾ.ಪ ಕೋಶಾಧ್ಯಕ್ಷರಾದ ಎ. ಕೆ. ಚಂದ್ರಪ್ಪ, ಕಾರ್ಯದರ್ಶಿಗಳಾದ ಡಿ. ಗಣೇಶ್, ಅನುರಾಧ, ಶಿಕ್ಷಕಿ ಮೇರಿ ಡಿಸೋಜಾ, ಗಾಯಕಿ ನಳಿನಾಕ್ಷಿ, ಲೀಲಾವತಿ, ಬೈರಾಪುರ ಶಿವಪ್ಪಗೌಡ, ಗೋಪಿಶೆಟ್ಟಿಕೊಪ್ಪದ ಮಂಜುನಾಥ ಉಪಸ್ಥಿತರಿದ್ದರು. ಶಿಕ್ಷಕಿ ಸುಜಾತ ಸ್ವಾಗತಿಸಿ ವೀಣಾ ನಿರೂಪಿಸಿ ಶೋಭಾ ವಂದಿಸಿದರು. ವಿದ್ಯಾರ್ಥಿಗಳು ತಮಿಳು, ತೆಲಗು, ಲಂಬಾಣಿ ಸೇರಿದಂತೆ ಹಲವು ಭಾಷೆಗಳಲ್ಲಿ ಕನ್ನಡ ಭಾಷೆಯ ಮಹತ್ವ ಕುರಿತು ಮಾತನಾಡಿದರು.

# ರಾಷ್ಟ್ರೀಯ ಶಿಕ್ಷಣ ಸಮಿತಿ 75 ನೇ ವರ್ಷದ ಅಮೃತ ಮಹೋತ್ಸವ ಸಂಭ್ರಮ

ಮೊದಲ ಪುಟದಿಂದ
ಕೋವಿಡ್ ಸಾಂಕ್ರಾಮಿಕ ಹಿನ್ನಲೆಯಲ್ಲಿ ಅಮೃತ ಮಹೋತ್ಸವ ಆಚರಣೆಯನ್ನು ಮುಂ ದೂಡಲಾಗಿತ್ತು. ಈ ಹಿನ್ನಲೆಯಲ್ಲಿ 2022–23ರ ವರ್ಷವನ್ನು ಎನ್.ಇ.ಎಸ್ ಅಮೃತ ವರ್ಷವೆಂದು ಘೋಷಿಸಲಾಗಿದ್ದು ಪ್ರತಿ ತಿಂಗಳು ಉಪನ್ಯಾಸ ಸರಣಿ ಸೇರಿದಂತೆ ವಿವಿಧ ವೈಜ್ಞಾನಿಕ, ಸಾಹಿತ್ಯ, ಸಾಂಸ್ಕೃತಿಕ ಕಾರ್ಯ ಚಟುವಟಿಕೆಗಳನ್ನು ನಡೆಸಲು ಉದ್ದೇಶಿಸಲಾಗಿದೆ. ಅಮೃತ ಮಹೋತ್ಸವದ ಸವಿನೆನಪಿಗಾಗಿ ಒಂದು ಶಾಶ್ವತ ಯೋಜನೆಯನ್ನು ಸಹ ಅನುಷ್ಠಾನಗೊಳಿಸಲಾಗುವುದು.

ವಿದ್ಯಾರ್ಥಿಗಳೊಂದಿಗೆ ಇಸ್ರೋ ಮಾಜಿ ಅಧ್ಯಕ್ಷ ಡಾ.ಶಿವನ್ ಸಂವಾದ: ಮಾ.12 ರಂದು ಮಧ್ಯಾಹ್ನ 03:00 ಗಂಟೆಗೆ ಜೆ.ಎನ್.ಎನ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ಅಮೃತ ಮಹೋತ್ಸವದ ಉಪನ್ಯಾಸ ಸರಣಿಯ ಪ್ರಥಮ ಉಪನ್ಯಾಸ ಆಯೋಜಿಸಲಾಗಿದ್ದು ಇಸ್ರೋ ಮಾಜಿ ಅಧ್ಯಕ್ಷರಾದ ಡಾ.ಕೆ.ಶಿವನ್ ಅವರು 'ದೈನಂದಿನ ಜೀವನದಲ್ಲಿ ಬಾಹ್ಯಾಕಾಶ ತಂತ್ರಜ್ಞಾನದ ಪ್ರಭಾವ' ಕುರಿತಾಗಿ ಮಾತನಾಡಲಿದ್ದು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಲಿದ್ದಾರೆ.

ಗೋಷ್ಠಿಯಲ್ಲಿ ರಾಷ್ಟ್ರೀಯ ಶಿಕ್ಷಣ ಸಮಿತಿ ಅಧ್ಯಕ್ಷ ಎ.ಎಸ್.ವಿಶ್ವನಾಥ, ಉಪಾಧ್ಯಕ್ಷ ಟಿ.ಆರ್. ಅಶ್ವಥ ನಾರಾಯಣ ಶೆಟ್ಟಿ, ಖಜಾಂಚಿ ಸಿ.ಆರ್. ನಾಗರಾಜ, ಕುಲಸಚಿವ ಪ್ರೊ.ಟಿ.ಎಸ್. ಹೂವಯ್ಯಗೌಡ, ಸಾರ್ವ ಜನಿಕ ಸಂಪರ್ಕಾಧಿಕಾರಿ ಸಿ.ಎಂ.ನೃಪತುಂಗ ಉಪಸ್ಥಿತರಿದ್ದರು.

# ಭದ್ರಾವತಿ ತಾಲ್ಲೂಕು ವರದಿಗಾರರಾಗಿ ಯೋಗೇಶ್

ಭದ್ರಾವತಿ ತಾಲ್ಲೂಕಿನ ತುಂಗಾ ತರಂಗ ದಿನಪತ್ರಿಕೆ ವರದಿಗಾರರಾಗಿ ಯೋಗೇಶ್ ಜಿ. ಅವರನ್ನು ನೇಮಸಲಾಗಿದೆ. ಭದ್ರಾವತಿ ತಾಲ್ಲೂಕಿನ ಸುದ್ದಿ, ಮಾಹಿತಿ, ಜಾಹೀರಾತು ಇತ್ಯಾದಿ ವಿವರಗಳನ್ನು ಇವರಿಗೆ ನೀಡಲು ಕೋರಲಾಗಿದೆ.



ವಿಳಾಸ: ಯೋಗೇಶ್ ಜಿ
ಮನೆ ನಂ.565, 4ನೇ ತಿರುವು ಸುರುಗಿತೋಪು,
ಭದ್ರಾವತಿ
ಮೊ.ನಂ: 7899264751, 7349147751
–ಸಂ

# ಶಿವಮೊಗ್ಗದಲ್ಲಿ ಆಯುಷ್ ವಿವಿ

ಮೊದಲನೇ ಪುಟದಿಂದ
ಮಲೆನಾಡಿನ ಪ್ರದೇಶದಲ್ಲಿ ಸಂಶೋಧನೆ ಹೆಚ್ಚು ಸುಲಭವಾಗುತ್ತದೆ ಎಂದು ಅವರು ತಿಳಿಸಿದ್ದಾರೆ. ಇದರ ಜೊತೆಗೆ ಮಲೆನಾಡಿನಲ್ಲಿ ಔಷಧಿ ಸಸ್ಯಗಳ ಬೆಳೆಯಲು ಪ್ರೋತ್ಸಾಹ ಸಿಗುತ್ತದೆ. ಮಲೆನಾಡಿನಲ್ಲಿ ಸ್ವಾಭಾವಿಕವಾಗಿಯೇ ಔಷಧಿ ಸಸ್ಯಗಳು ಹೇರಳವಾಗಿವೆ. ಇದರ ಉಪಯೋಗವನ್ನು ಕೂಡ ವಿವಿ ಸ್ಥಾಪನೆಯಾಗುವುದರಿಂದ ಪಡೆಯಬಹುದಾಗಿದೆ ಮತತ್ಲು ಔಷಧಿ ಸಸ್ಯಗಳ ಮೇಲೆಯೂ ಕೂಡ ಸಂಶೋಧನೆ ಹೆಚ್ಚಾಗುತ್ತದೆ.

ಅಲ್ಲದೇ, ಪ್ರತಿವರ್ಷ ಆಯುಷ್ ಪದವೀಧರರು ಹೊರ ಬರುವುದರಿಂದ ಉದ್ಯೋಗಕ್ಕೆ ಅನುಕೂಲವಾಗುತ್ತದೆ. ಆದರೆ, ಇವರು ಕೂಡ ಅಲೋಪಥಿ ಆಸ್ಪತ್ರೆಗಳಲ್ಲಿ ಕೆಲಸ ಮಾಡುವಂತೆ ಸರ್ಕಾರ ಪ್ರೋತ್ಸಾಹ ನೀಡಬೇಕು. ಮತತ್ಲು ಸಂಶೋಧನೆಗೆ ಆದ್ಯತೆ ಕೊಡಬೇಕು. ವಿದ್ಯಾಭ್ಯಾಸಕ್ಕೆ ಸಾಲ ಒದಗಿಸಬೇಕು. ಒಟ್ಟಾರೆ ಶಿವಮೊಗ್ಗದಲ್ಲಿ ಆಯುಷ್ ವಿವಿ ಸ್ಥಾಪನೆಯಾಗುತ್ತಿರುವುದು ಸ್ವಾಗತದ ವಿಷಯ ಎಂದು ಅವರು ತಿಳಿಸಿದ್ದಾರೆ.

# ವಿವೇಕ ಪಡೆದ ಮಹಿಳೆಯೇ ಸಬಲಳು

..ಮೊದಲನೇ ಪುಟದಿಂದ
. ಸಾಮಾಜಿಕ ಸೇವೆ ಕ್ಷೇತ್ರದಿಂದ ಹೆಚ್.ಎಂ.ರುಕ್ಮಿಣಿ ನಾಯಕ್, ಆರೋಗ್ಯ ಮತ್ತು ಇತರೆ ಸೇವಾ ಕ್ಷೇತ್ರದಿಂದ ಆರೋಗ್ಯ ಮೇರಿ ಹಾಗೂ ಕ್ರೀಡಾ ಕ್ಷೇತ್ರದಿಂದ ಸಣ್ಣನಂಜಮ್ಮ ಇವರನ್ನು ಗೌರವಿಸಲಾಯಿತು.

ಬಹುಮಾನ ವಿತರಣೆ : ಮಹಿಳಾ ದಿನಾಚರಣೆ ಪ್ರಯುಕ್ತ ಪಾಲಿಕೆ ವತಿಯಿಂದ ಮಹಿಳೆಯರಿಗೆ ಏರ್ಪಡಿಸಲಾಗಿದ್ದ ವಿವಿಧ ಕ್ರೀಡೆ ಮತ್ತು ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಪಾಲಿಕೆ ಮಹಾಪೌರರು, ಸದಸ್ಯರಾದ ಆರತಿ ಅ.ಮ.ಪ್ರಕಾಶ್, ರೇಖಾ ರಂಗನಾಥ್ ಮತ್ತಿತರರು ಬಹುಮಾನ ವಿತರಣೆ ಮಾಡಿದರು.

ಕಾರ್ಯಕ್ರಮದಲ್ಲಿ ಪಾಲಿಕೆ ಮಹಾಪೌರರಾದ ಸುನೀತಾ ಅಣ್ಣಪ್ಪ, ಪಾಲಿಕೆ ಆಡಳಿತ ಪಕ್ಷದ ನಾಯಕ ಎಸ್.ಎನ್.ಚನ್ನಬಸಪ್ಪ, ಸದಸ್ಯರಾದ ಸುವರ್ಣ ಶಂಕರ್, ವಿಶ್ವಾಸ್, ಭಾನುಮತಿ ಶೇಟ್, ಸುರೇಖಾ ಮುರಳೀಧರ್ ಇದ್ದರು.

# ವಿಕಲಚೇತನರಿಗೆ ಸಾಧನ–ಸಲಕರಣೆ ವಿತರಿಸಲು ಉಚಿತ ತಪಾಸಣಾ ಶಿಬಿರ

ಶಿವಮೊಗ್ಗ,ಮಾ.8:
ಕೇಂದ್ರ ಸರ್ಕಾರದ ಅಡಿಪ್ ಯೋಜನೆಯಡಿ ಜಿಲ್ಲೆಯ ವಿಕಲಚೇತನರಿಗೆ ಅವಶ್ಯಕ ಸಾಧನ ಸಲಕರಣೆಗಳನ್ನು ವಿತರಿಸಲು ಅಲಿಂಕೋ ಸಂಸ್ಥೆಯಿಂದ ಉಚಿತ ತಪಾಸಣಾ ಶಿಬಿರವನ್ನು ಪ್ರತಿ ತಾಲ್ಲೂಕು ಮಟ್ಟದ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಮಾರ್ಚ್ 09 ರಿಂದ ಆಯೋಜಿಸಲಾಗಿದೆ.

ಅಡಿಪ್ ಯೋಜನೆಯಡಿ ವಿಕಲಚೇತನ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಶಿವಮೊಗ್ಗ ಇವರ ಸಹಯೋಗದಲ್ಲಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಶಿಬಿರದಲ್ಲಿ ಭಾಗವಹಿಸುವ ವಿಕಲಚೇತನರು ವಿಕಲಚೇತನರ ಗುರುತಿನ ಚೀಟಿ/ಯು.ಡಿ.ಐ.ಡಿ ಕಾರ್ಡ್, ಆದಾಯ ಪ್ರಮಾಣ ಪತ್ರ/ಬಿಪಿಎಲ್ ರೇಷನ್, ಆಧಾರ್ ಕಾರ್ಡ್ ಮತ್ತು ಚುನಾವಣಾ ಗುರುತಿನ ಚೀಟಿ(ಒರಿಜಿನಲ್ ಮತ್ತು ಜೆರಾಕ್ಸ್ ಪ್ರತಿ)ಹಾಗೂ 02 ಕಲರ್ ಭಾವಚಿತ್ರಗಳನ್ನು ತರಬೇಕು.

ಶಿಬಿರ ನಡೆಯುವ ಸ್ಥಳ ಮತ್ತು ದಿನಾಂಕ: ಶಿಕಾರಿಪುರ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ ದಿ: 09–03–2022, ಸಂಪರ್ಕಿಸಬೇಕಾದ ಸಂಖ್ಯೆ ಹುಚ್ಚರಾಯಪ್ಪ ಮೊ.ಸಂ: 9741161346. ಶಿರಾಳಕೊಪ್ಪ ಸಾರ್ವಜನಿಕ ಆಸ್ಪತ್ರೆ ದಿ: 10–03–2022 ಹುಚ್ಚರಾಯಪ್ಪ ಮೊ.ಸಂ 9441161346. ಶಿವಮೊಗ್ಗ ಜಿಲ್ಲಾ ಮೆಗ್ಗಾನ್ ಬೋಧನಾ ಆಸ್ಪತ್ರೆ ದಿ: 11–03–2022 ಮಲ್ಲಿಕಾರ್ಜುನ 9980150110. ತೀರ್ಥಹಳ್ಳಿ ಸಾರ್ವಜನಿಕ ಆಸ್ಪತ್ರೆ ದಿ: 12.03–2022 ದಿವಾಕರ್ ಬಿ.ಆರ್ ಮೊ.ಸಂ: 9480767638. ಸಾಗರ ಸಾರ್ವಜನಿಕ ಆಸ್ಪತ್ರೆ ದಿ: 14–03–2022 ಶ್ಯಾಮಸುಂದರ್ ಮೊ.ಸಂ: 9535247757. ಹೊಸನಗರ ಸಾರ್ವಜನಿಕ ಆಸ್ಪತ್ರೆ ದಿ: 15–03–2022 ರವಿಕುಮಾರ್ ಮೊ.ಸಂ: 9731922693. ಸೊರಬ ಸಾರ್ವಜನಿಕ ಆಸ್ಪತೆ ದಿ: 16–03–2022 ಭರತ್ ಕುಮಾರ್ ಮೊ.ಸಂ: 9110493122. ಭದ್ರಾವತಿ ಸಾರ್ವಜನಿಕ ಆಸ್ಪತ್ರೆ ದಿ: 17–03–2022 ದಿನೇಶ್ ಮೊ.ಸಂ: 7899137243.

# ಗ್ರಾಮೀಣ ಭಾಗದಲ್ಲಿ ವಿದ್ಯುತ್ ವ್ಯತ್ಯಯ

ಶಿವಮೊಗ್ಗ,ಮಾ. 08:
ಶಿವಮೊಗ್ಗ ಎಂ.ಆರ್.ಎಸ್. 220 ಕೆವಿ ಮುಖ್ಯ ಸ್ವೀಕರಣಾ ಕೇಂದ್ರದ 66 ಕೆವಿ ಬಸ್‌ನ ಕ್ಲಾಂಪ್ ತೀವ್ರ ಉಷ್ಣತೆ ಹೊಂದಿರುವುದರಿಂದ ಅತೀ ತುರ್ತಾಗಿ ಅದನ್ನು ಬದಲಿಸಬೇಕಾಗಿರುವುದರಿಂದ ಮಾರ್ಚ್ 09 ರಂದು ಬೆಳಿಗ್ಗೆ 09 ರಿಂದ ಮಧ್ಯಾಹ್ನ 12 ಗಂಟೆವರೆಗೆ ಕೆಳಕಂಡ ಪ್ರದೇಶದಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಹೊಳಲೂರು ವಿವಿ ಕೇಂದ್ರ, ತಾವರೆಚಟ್ನಹಳ್ಳಿ ವಿವಿ ಕೇಂದ್ರ ಮತ್ತು ಹೊಳೆಹೊನ್ನೂರು ವಿವಿ ಕೇಂದ್ರದಿಂದ ವಿದ್ಯುತ್ ಸರಬರಾಜು ಪಡೆಯುವ ಗ್ರಾಮಗಳಾದ ಹೊಳಲೂರು, ಮಡಿಕೆ ಚೀಲೂರು, ಹಾಡೋನಹಳ್ಳಿ, ಹೊಳೆಹಟ್ಟಿ, ಸೂಗೂರು, ಕ್ಯಾತಿನಕೊಪ್ಪ, ಬುಳ್ಳಾಪುರ, ಬೇಡರಹೊಸಳ್ಳಿ, ಹರಮಘಟ್ಟ, ಸೋಮಿನಕೊಪ್ಪ, ಆಲದಹಳ್ಳಿ, ಸುತ್ತುಕೋಟೆ, ಕೊಮ್ಮನಾಳ್, ಬಿಕ್ಕೋನಹಳ್ಳಿ, ಬೂದಿಗೆರೆ, ಬೀರನಕೆರೆ, ಬನ್ನಿಕೆರೆ, ಅಬ್ಬಲಗೆರೆ, ಹುಣಸೋಡು, ಕಲ್ಲಗಂಗೂರು, ಚನ್ನಮುಂಬಾಪುರ, ಮತ್ತೋಡು, ರತ್ನಗಿರಿ ನಗರ, ರತ್ನಾಕರ ಲೇಔಟ್, ಇಂಜಿನಿಯರಿಂಗ್ ಕಾಲೇಜು, ಕೃಷಿ ಕಾಲೇಜು, ಗೊಂದಿಚಟ್ನಹಳ್ಳಿ, ಹೊಳೆಹನಸವಾಡಿ, ಕುಂಚೇನಹಳ್ಳಿ, ಬೀರನಕೆರೆ, ಬಿಕೋನಹಳ್ಳಿ, ಕಲ್ಲಾಪುರ, ಬಸವನಗಂಗೂರು, ಮೇಲಿನ ಹನಸವಾಡಿ, ಬೆಳಲಕಟ್ಟೆ, ಮೋಜಪ್ಪ ಹೊಸೂರು, ಸುತ್ತಮುತ್ತಲಿನ ಜಲ್ಲಿ ಕ್ರಷರ್‌ಗಳು, ಕೂಡ್ಲಿ, ಚಿಕ್ಕೋಡಿ, ಭದ್ರಾಪುರ, ಕಾಟಿಕೆರೆ, ವೆಂಕಟಾಪುರ, ಬುಕಾಪುರ, ಹೊಳೆಬೆಳಗಲು ಮತ್ತು ಸುತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

# ಮಹಿಳೆ ಅಬಲೆಯಲ್ಲ 'ಸಬಲೆ'

ವಿಶ್ವ ಮಹಿಳಾ ದಿನಾಚರಣೆ ನಿಮಿತ್ತ "ಹೆಣ್ಣೆಂದರೆ ಆಳತೆಯಲ್ಲ, ಹೆಣ್ಣೆಂದರೆ ಜಗನ್ಮಾತೆ–ಜಗದ ಸೃಷ್ಟಿದಾತೆ" ಎಂಬ ವಿಚಾರದೊಂದಿಗೆ ಮಹಿಳೆಯ ಕುರಿತು ಅತಿಥಿ ಉಪನ್ಯಾಸಕಿ, ಕವಿ, ಲೇಖಕಿ 'ಬಿಂದು ಆರ್.ಡಿ. ರಾಂಪುರ" ಅವರ ವಿಶೇಷ ಲೇಖನ ಇಂದಿನ ನಿಮ್ಮ ತುಂಗಾತರಂಗ ದಿನಪತ್ರಿಕೆಯಲ್ಲಿ ಪ್ರಕಟ –ಸಂ.



ಮಹಿಳೆಯರನ್ನು ಇನ್ನೂ ಒಂದು ಭೋಗದ ವಸ್ತುವನ್ನಾಗಿ ನೋಡುತ್ತಿದ್ದವು. ಅದರಿಂದ ಸಮಾಜದ ಮುಖ್ಯವಾಹಿನಿಯಿಂದ ಅವಳನ್ನು ದೂರ ಇಟ್ಟು ಕಡೆಗಣಿಸಿದ್ದರಿಂದ ಮತ್ತು ಮಹಿಳೆಯರು ಇನ್ನೂ ಅಶಕ್ತರು ಇರುವದರಿಂದಲೇ ಮಹಿಳಾ ಸಶಕ್ತೀಕರಣ ಎಂಬ ವಿಷಯವು ಹೆಚ್ಚು ಪ್ರಾಮುಖ್ಯತೆ ಪಡೆದಕೊಂಡಿದೆ. ಮತ್ತು ಅವರು ಸಶಕ್ತರಾಗುವ ತನಕ ಮುಂದುವರಿಯುತ್ತಲೇ ಇರುತ್ತದೆ. ಅನಾದಿ ಕಾಲದಿಂದಲೂ ಭಾರತೀಯ ಮಹಿಳೆ ವೈಶಿಷ್ಟ್ಯಪೂರ್ಣವಾಗಿ ಇರುವಳು. ಸ್ನೇಹ, ಸಹನಶೀಲತೆ, ಮಮತೆ ಮುಂತಾದ ಸದ್ಗುಣಗಳ ಗಣಿಯಾಗಿರುವ ಮನೆಯ ಸರ್ವತೋಮುಖ ಏಳಿಗೆಗಾಗಿ ಪರಿಶ್ರಮ ಪಡುತ್ತಾ ಆರ್ಥಿಕವಾಗಿ ಪುರುಷನ ಸಮಾನವಾಗಿ ದುಡಿಯುತ್ತಿದ್ದಾರೆ.

"ಮಹಿಳಾಸಬಲೀಕರಣ" ಎಂದರೆ ಮಹಿಳೆಯರಲ್ಲಿ ಬೌದ್ಧಿಕ, ರಾಜಕೀಯ, ಸಾಮಾಜಿಕ, ಆರ್ಥಿಕ ಬಲವನ್ನು ಹೆಚ್ಚಿಸುವುದಕ್ಕೆ ಮಹಿಳಾ ಸಬಲೀ ಕರಣ, ಸಶಕ್ತತೆ ಎನ್ನುತ್ತಾರೆ. ಸಬಲೀಕರಣ ಶಕ್ತತೆ ಎನ್ನುವುದು ಸಾಮಾನ್ಯವಾಗಿ ಮಹಿಳೆಯರಲ್ಲಿ ಆತ್ಮವಿಶ್ವಾಸವನ್ನು ಬೆಳೆಯಿಸಿ, ಅವರ ಸಾಮರ್ಥ್ಯವನ್ನು ಹೆಚ್ಚಿಸುವುದೇ ಆಗಿರುತ್ತದೆ. ಸಬಲೀಕರಣ ಸಶಕ್ತತೆ ಎಂದರೆ, ಕೆಳಗೆ ಕಾಣಿಸಿದ ಅಂಶಗಳಲ್ಲಿ ಒಟ್ಟಾರೆಯಾಗಿ ಅವರ ಅರ್ಹತೆ ಸಾಮರ್ಥ್ಯ ವನ್ನು ಹೆಚ್ಚಿಸುವುದು. ಸ್ವಯಂ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯವನ್ನು ಹೊಂದುವುದು.

ಮಾಹಿತಿ ಮತ್ತು ಸಂಪನ್ಮೂಲಗಳ ಬಗ್ಗೆ ತಿಳಿದುಕೊಳ್ಳುವ ಹಾಗೂ ಅವುಗಳ ಬಗ್ಗೆ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ ಹೊಂದುವುದು. ಅವರ ಇಚ್ಛೆಗೆ ಅನುಸಾರವಾಗಿ ಆಯ್ಕೆ ಮಾಡುವ ಅವಕಾಶಗಳನ್ನು ಹೊಂದುವುದು.

ಒಟ್ಟಿಗೇ ಅಥವಾ ಗುಂಪು ನಿರ್ಣಯ ತೆಗೆದುಕೊಳ್ಳುವುದರಲ್ಲಿ ವಿಶ್ವಾಸದಿಂದ ಧೃಡಪಡಿಸುವ ಸಾಮರ್ಥ್ಯವನ್ನು ಹೊಂದುವುದು. ಬದಲಾವಣೆಯನ್ನು ಮಾಡುವುದರಲ್ಲಿ ಧನಾತ್ಮಕ ಭಾವನೆಯನ್ನು ಹೊಂದುವುದು. ಸ್ವಯಂ ಮತ್ತು ಗುಂಪು ಪ್ರಾಬಲ್ಯವನ್ನು ಹೆಚ್ಚಿಸಲು ವಿವಿಧ ಕೌಶಲ್ಯಗಳನ್ನು ಅಳವಡಿಸಿಕೊಳ್ಳುವುದು. ಪ್ರಜಾ ಪ್ರಭುತ್ವದ ಮಾರ್ಗದಲ್ಲಿ ಇತರರ ಗ್ರಹಿಕೆ ಶಕ್ತಿಯನ್ನು ಬದಲಾಯಿಸುವಂತೆ ಮಾಡುವುದು. ಸ್ವಯಂ ಪ್ರೇರೇಪಿತರಾಗಿ ನಿರಂತರ ಬದಲಾ ವಣೆಯ ಬೆಳವಣಿಗೆ ಪ್ರಕ್ರಿಯೆಯಲ್ಲಿ ಭಾಗವಹಿಸುವುದು.

ಆತ್ಮಾಭಿಮಾನ ಹೆಚ್ಚು ಮಾಡುವುದರಲ್ಲಿ ಹಾಗೂ ಕಳಂಕದಿಂದ ಪಾರಾಗುವುದರಲ್ಲಿ ತೊಡಗಿಕೊಳ್ಳುವುದು. ಭಾರತದಲ್ಲಿ ಮಹಿಳೆಯರ ಸ್ಥಾನಮಾನ ಇತ್ತೀಚೆಗೆ ಭಾರತದಲ್ಲಿ ಮಹಿಳೆಯರು ಶಿಕ್ಷಣ, ರಾಜಕೀಯ, ಮಾಧ್ಯಮ, ಕಲೆ, ಸಾಂಸ್ಕೃತಿಕ, ಸೇವಾ ವಿಭಾಗಗಳು, ವಿಜ್ಞಾನ ಮತ್ತು ತಾಂತ್ರಿಕ ಇತ್ಯಾದಿ ಕ್ಷೇತ್ರಗಳಲ್ಲಿ ಭಾಗವಹಿಸುತ್ತಿದ್ದಾರೆ.

ಭಾರತೀಯ ಸಂವಿಧಾನವು ಮಹಿಳೆಯರೆಲ್ಲರಿಗೂ ಸಮಾನತೆ ರಾಜ್ಯದಿಂದ ತಾರತಮ್ಯ ವಿರಕೂಡದು ಸಮಾನ ಅವಕಾಶಗಳನ್ನು ನೀಡಿದೆ. ಇಷ್ಟಲ್ಲದೆ ರಾಜ್ಯಗಳು ಮಹಿಳೆಯರು ಮತ್ತು ಮಕ್ಕಳ ಪರವಾಗಿ ಹಲವು ಸವಲತ್ತುಗಳನ್ನು ಒದಗಿಸಿದೆ, ಮಹಿಳೆಯರಿಗೆ ಸೂಕ್ತವಾದ ಮತ್ತು ಮಾನವೀಯತೆಯಿಂದ ಕೂಡಿದ ಕೆಲಸದ ವಾತಾವರಣ ಮತ್ತು ಮಾತೃತ್ವದ ಸವಲತ್ತುಗಳನ್ನು, ಭದ್ರತೆ ನೀಡುವಂತಹ ಅವಕಾಶಗಳನ್ನು ಕಲ್ಪಿಸಿದೆ.

ಮಹಿಳಾ ಸಬಲೀಕರಣದ ಇತಿಹಾಸ ಮಹಿಳಾ ಸಬಲೀಕರಣದ ಇತಿಹಾಸವು ನಿಖರವಾಗಿ ಹೇಳಲು ಆಗುವುದಿಲ್ಲ, ಇದು ಕೆಲವು ಚಳವಳಿಗಳು, ಪ್ರತಿಭಟನೆಗಳು, ಕ್ರಾಂತಿಗಳು ಮಹಿಳಾ ಸಬಲೀಕರಣದ ಕಾರಣ ವನ್ನು ಹೆಚ್ಚು ವೇಗವಾಗಿ ಹೆಚ್ಚಿಸಿವೆ. 20 ನೇ ಶತಮಾನ ದಿಂದ ಮಹಿಳೆಯರು ಉದ್ಯೋಗ ಅವಕಾಶಗಳನ್ನು ಪಡೆದರು. , ಸಮಾಜದ ಕೆಳಸ್ತರದಲ್ಲಿರುವ ಮಹಿಳೆಯರು ಸಬಲೀಕರಣಗೊಳ್ಳದಿದ್ದರೆ ಮಹಿಳಾ ಸಬಲೀಕರಣ ಯಶಸ್ವಿಯಾಗಲು ಸಾಧ್ಯವಿಲ್ಲ. 21 ನೇ ಶತಮಾನದ ಆರಂಭದ ನಂತರ, ತಳ ಮಟ್ಟಕ್ಕೆ ಸೇರಿದ ಮಹಿಳೆಯರು ಪುರುಷರಿಗೆ ಮಾತ್ರ ಮೀಸಲಾದ ಅನೇಕ ವೃತ್ತಿಪರ ಕೆಲಸಗಳನ್ನು ಕಂಡುಕೊಂಡಿದ್ದಾರೆ. ಇಂದು ಅನೇಕ ಮಹಿಳಾ ಮೇಸ್ತ್ರಿಗಳು, ಬಸ್ ಚಾಲಕರು, ಪೆಟ್ರೋಲ್ ಪಂಪ್ ಅಟೆಂಡರ್‌ಗಳು, ರೈತರು ಇತ್ಯಾದಿ. ಮತ್ತು ಈ ಎಲ್ಲಾ ಮಹಿಳೆಯರು ತಮ್ಮ ಕೆಲಸವನ್ನು ಅತ್ಯಂತ ಉತ್ತಮವಾಗಿ ಮಾಡುತ್ತಿದ್ದಾರೆ.

ಭಾರತದಲ್ಲಿ ಮಹಿಳಾ ಸಬಲೀಕರಣವನ್ನು ಇತರ ದೇಶಗಳಲ್ಲಿ ಹೋಲಿಸಲಾಗುವುದಿಲ್ಲ. ವೈದಿಕ ಯುಗದಲ್ಲಿ ಸ್ತ್ರೀಯರಿಗೆ ಹೆಚ್ಚಿನ ಗೌರವವಿತ್ತು. ಮಹಿಳಾ ಶಿಕ್ಷಣದತ್ತ ಗಮನ ಹರಿಸಲೇ ಇಲ್ಲ. 'ಸಹಧರ್ಮಿಣಿ' ಎಂಬ ಪದವು ವೇದಕಾಲದಿಂದಲೂ ತಿಳಿದಿತ್ತು. ಸಹಧರ್ಮಿಣಿ ಎಂದರೆ? ಸಮಾನ ಪಾಲುದಾರ. ದೇಶವು ತನ್ನ ಮಹಿಳಾ ಪ್ರಧಾನ ಮಂತ್ರಿ ಮತ್ತು ಅಧ್ಯಕ್ಷರನ್ನು ಕಂಡಿತು, ದೇಶವು ಸೈನಾ ನೆಹ್ವಾಲ್ ಅಥವಾ ಪಿ.ಟಿ ಉಷಾ ಅವರಂತಹ ಅನೇಕ ಪ್ರಖ್ಯಾತ ಮಹಿಳಾ ಕ್ರೀಡಾಪಟುಗಳನ್ನು ಹೊಂದಿದೆ, ದೇಶವು ಎ. ಚಟರ್ಜಿ ಅಥವಾ ಬಿ ವಿಜಯಲಕ್ಷ್ಮಿ ಅವರಂತಹ ಪ್ರತಿಭಾವಂತ ಮಹಿಳಾ ವಿಜ್ಞಾನಿಗಳಿಂದ ಕೂಡಿದೆ ಭಾರತದಲ್ಲಿ ಮಹಿಳೆಯರು ಯಾವುದೇ ಹಿಂಜರಿಕೆಯಿಲ್ಲದೆ ಯುದ್ಧ ಪಡೆಗಳನ್ನು ಸೇರುತ್ತಿದ್ದಾರೆ. ಆದಾಗ್ಯೂ, ಭಾರತದಲ್ಲಿ ಪಿತೃಪ್ರಭುತ್ವದ ಹಿಡಿತದಿಂದ ಹೊರಬರಲು ಇನ್ನೂ ಕಷ್ಟ ಪಡುತ್ತಿರುವ ಅನೇಕ ಮಹಿಳೆಯರು ಇದ್ದಾರೆ? ವಿಶೇಷವಾಗಿ ಗ್ರಾಮೀಣ ವಲಯದಲ್ಲಿ.

ಮಹಿಳೆಯರ ಸಬಲೀಕರಣಕ್ಕೆ ಸ್ವಾತಂತ್ರ್ಯಕ್ಕಾಗಿ, ನಡೆಸಿದ ಅನೇಕ ಮಹನೀಯರ ಬಗ್ಗೆ ತಿಳಿದು ಬರುತ್ತದೆ. ಅವರಲ್ಲಿ ಪ್ರಮುಖರಾದವರೆಂದರೆ ಬುದ್ಧ, ಬಸವಣ್ಣ, ರಾಜಾರಾಮ್ ಮೋಹನ್ ರಾಯ್, ಈಶ್ವರ್ ಚಂದ್ರ ವಿದ್ಯಾಸಾಗರ, ಸ್ವಾಮಿ ವಿವೇಕಾನಂದ, ಮಹಾತ್ಮ ಗಾಂಧಿ, ಜವಾಹರಲಾಲ್ ನೆಹರು ಮುಂತಾದವರು. ಇವರಲ್ಲದೇ ಬ್ರಿಟಿಷ್ ಸರಕಾರವು ಕೂಡ ಮಹಿಳೆಯರ ಸಶಕ್ತಿಕರಣ ಕೆಲವೊಂದು ಕಾನೂನುಗಳನ್ನು ಜಾರಿಗೆ ತಂದಿತು. ಆದರೆ ಮಹಿಳೆಯರನ್ನು ಸಬಲೀಕರಣಗೊಳಿಸಬೇಕು ಎಂಬ ಇಚ್ಛೆ ಬಂದಿದ್ದ ಜನರಿಂದ ಮಾತ್ರ ಮಹಿಳೆಯರ ಸಶಕ್ತಿಕರಣ ಮಾಡಲು ಸಾಧ್ಯವಾಗುವುದಿಲ್ಲ. ಮಹಿಳೆಯರು ಸ್ವಂತ ತಾವೇ ಮುಂದೆ ಬಂದು ಯಾವುದೇ ಜಾತಿ ಧರ್ಮ ಎಂದು ಭೇದ ಮಾಡದೆ ತಮ್ಮ ಸಶಕ್ತೀಕರಣದ ಕಡೆಗೆ ಒಗ್ಗಟ್ಟಾಗಿ ಮುಂದೆ ಸಾಗಬೇಕು ಸಾಮಾನ್ಯ ಮಹಿಳೆಯರು ಈಗಾಗಲೇ ಸಶಕ್ತಿಕರಣ ಗೊಂಡು ಮಹತ್ವದ ಸಾಧನೆ ಮಾಡಿದ ಮಹಿಳೆಯರಿಂದ ಪ್ರಭಾವಿತರಾಗಿ ಅವರ ಮಾರ್ಗವನ್ನು ಅನುಸರಿಸಲು ಪ್ರಯತ್ನಿಸಬೇಕು. ಇಂತಹ ಪ್ರಭಾವಿದಿಟ್ಟ ಮಹಿಳೆಯರಲ್ಲಿ ಪ್ರಮುಖರಾದವರೆಂದರೆ. ಭಾರತದ ಪ್ರಥಮ ಮಹಿಳಾ ಪ್ರಧಾನಿ ಮತ್ತು ಉಕ್ಕಿನ ಮಹಿಳೆ ಶ್ರೀಮತಿ ಇಂದಿರಾಗಾಂಧಿ. ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಪ್ರಥಮ ಮಹಿಳಾ ಅಧ್ಯಕ್ಷೆ ಶ್ರೀಮತಿ ವಿಜಯಲಕ್ಷ್ಮಿ ಪಂಡಿತ್, ನೊಬೆಲ್ ಶಾಂತಿ ಪುರಸ್ಕಾರ ಪಡೆದ ಸಮಾಜಸೇವಕಿ ಮದರ್ ತೆರೇಸಾ, ಗಾನಕೋಗಿಲೆ ಸರೋಜಿನಿ ನಾಯ್ಡು, ಪ್ರಥಮ ಮಹಿಳಾ ಮುಖ್ಯಮಂತ್ರಿ ಸುಚೇತ ಕೃಪಲಾನಿ, ಪ್ರಥಮ ಮಹಿಳಾ ಐಪಿಎಸ್ ಅಧಿಕಾರಿ ಕಿರಣ್ ಬೇಡಿ, ಕಲ್ಪನಾ ಚಾವ್ಲಾ, ಮೀರಾಕುಮಾರಿ, ಐಶ್ವರ್ಯ ರೈ, ಲತಾಮಂಗೇಶ್ಕರ್, ಸೋನಿಯಾಗಾಂಧಿ ಸುಷ್ಮಾಸ್ವರಾಜ್, ಉಮಾಭಾರತಿ ಮುಂತಾದವರು ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ನಿರ್ಮಲಾ ಸಿತಾರಾಂ, ಮಾಯಾವತಿ, ಜಯಲಿಲಿತಾ, ಸುನೀತಾ ವಿಲಿಯಮ್ಸ್, ಇನ್ಫೋಸಿಸ್ ಸುಧಾ ಮೂರ್ತಿ, ಬಚೇಂದ್ರಿಪಾಲ್ , ಪದ್ಮಶ್ರೀ ಜೋಗತಿ ಮಂಜಮ್ಮ, ಇನ್ನೂ ಹಲವಾರು ಸಾಧಕಿ ಮಹಿಳೆಯರಿದ್ದಾರೆ.

ಮಹಿಳೆಯು ಎಲ್ಲಾ ಕ್ಷೇತ್ರಗಳಲ್ಲಿಯೂ ಮುನ್ನುಗ್ಗುತ್ತಿದ್ದಾರೆ. ಅವರ ಈ ಸಾಧನೆಗೆ ಸಹಾಯಕವಾದ ಶಿಕ್ಷಣ ಮತ್ತು ಮಾಧ್ಯಮಗಳಿಗೆ ಧನ್ಯವಾದಗಳನ್ನು ಅರ್ಪಿಸಲೇಬೇಕು. ಭಾರತೀಯ ಮಹಿಳೆಯು ಹೊಲದಲ್ಲಿ ಕೆಲಸ ಮಾಡುವುದರಿಂದ ಹಿಡಿದು ವಿಮಾನ ನಡೆಸುವ ಮತ್ತು ಮೌಂಟ್ ಎವರೆಸ್ಟ್ ಶಿಖರ ಹತ್ತುವ ಮಟ್ಟಕ್ಕೆ ಬೆಳೆದಿದ್ದಾಳೆ. ಮಹಿಳೆಯರು ಸಂಘಟಿತ, ಅಸಂಘಟಿತ, ಖಾಸಗಿ ಮತ್ತು ಸಾರ್ವಜನಿಕ ವಲಯಗಳಲ್ಲಿ ಕೈಗಾರಿಕೆಗಳಲ್ಲಿ ಪ್ರವೇಶಿಸಿ ತಮ್ಮ ಪ್ರತಿಭೆ ಮೆರೆಯುತ್ತಿದ್ದಾರೆ. ಸರ್ಕಾರವು ಹಿಂದುಳಿದ ವರ್ಗದ ಮಹಿಳೆಯರಿಗಾಗಿ ವಿಶೇಷ ಸವಲತ್ತುಗಳನ್ನು ಮತ್ತು ಮೀಸಲಾತಿ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟಿದೆ.

ಮಹಿಳಾ ಸಬಲೀಕರಣದಲ್ಲಿ ಸರ್ಕಾರದ ಪಾತ್ರ

1987 ರಲ್ಲಿ ಮಹಿಳಾ ತರಬೇತಿ ಮತ್ತು ಉದ್ಯೋಗಕ್ಕೆ ನೆರವು ನೀಡುವ ಯೋಜನೆಯನ್ನು, ಮಹಿಳೆಯರಿಗೆ ಉದ್ಯೋಗ ನೀಡುವ ಗುರಿಯೊಂದಿಗೆ ಜಾರಿಗೆ ತರಲಾಯಿತು. 1982ರ ಎರಡರಲ್ಲಿ ಗ್ರಾಮೀಣ ಪ್ರದೇಶದ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಯೋಜನೆಗಳನ್ನು ಜಾರಿಗೆ ತರಲಾಯಿತು. * 1988 ರಲ್ಲಿ ರಾಷ್ಟ್ರೀಯ ಮಹಿಳಾ ಸಮೃದ್ಧಿ ಯೋಜನೆ 1995 ರಲ್ಲಿ ಇಂದಿರಾ ಮಹಿಳಾ ಯೋಜನೆಯನ್ನು ಮತ್ತು 2001ರಲ್ಲಿ ಸ್ವಯಂಸಿದ್ಧ ಯೋಜನೆಗಳನ್ನು ಜಾರಿಗೆ ತರಲಾಯಿತು. ಗ್ರಾಮೀಣ ಜನತೆಗೆ ಉದ್ಯೋಗ ಒದಗಿಸುವ ಸ್ವರ್ಣ ಜಯಂತಿ ಗ್ರಾಮ ಸ್ವರೋಜಗಾರ್ ಯೋಜನೆ ಅಡಿಯಲ್ಲಿ ಶೇಕಡಾ 40ರಷ್ಟು ಫಲಾನುಭವಿಗಳು ಮಹಿಳೆಯರಿದ್ದಾರೆ.

ಕರ್ನಾಟಕದಲ್ಲಿ ಸ್ತ್ರೀಶಕ್ತಿ ಯೋಜನೆ ಮತ್ತು ಉದ್ಯೋಗದಲ್ಲಿ ಮೀಸಲಾತಿಯನ್ನು ಒದಗಿಸಲಾಗಿದೆ. ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ 1/3 ರಷ್ಟು ಮೀಸಲಾತಿಯನ್ನು ಒದಗಿಸಲಾಗಿದೆ. 2001ನೇ ವರ್ಷವನ್ನು" ಮಹಿಳಾ ಸಶಕ್ತಿಕರಣ ವರ್ಷ "ಎಂದು ಘೋಷಿಸಲಾಗಿದೆ ಮಹಿಳೆಯರ ಸಶಕ್ತಿಕರಣ ದಲ್ಲಿ ರಾಜಕೀಯ ಪಕ್ಷಗಳಿಗಿಂತ ಸ್ವಯಂಸೇವಾ ಸಂಸ್ಥೆಗಳು ಬಹಳ ಮಹತ್ವದ ಪಾತ್ರ ವಹಿಸಿವೆ.

ಮಹಿಳಾ ಸಬಲೀಕರಣ ಮಾಡುವುದು ಹೇಗೆ?

ಮಹಿಳೆಯು ಸುರಕ್ಷತೆ ಮತ್ತು ಉತ್ತಮ ಆರೋಗ್ಯ ಹೊಂದುವುದರ ಜೊತೆಗೆ ಸಾಮಾಜಿಕ, ಆರ್ಥಿಕ, ರಾಜಕೀಯ ಸಾಂಸ್ಕೃತಿಕ, ಬೌದ್ಧಿಕ, ಶೈಕ್ಷಣಿಕ, ಮಾನಸಿಕ ಹಾಗೂ ದೈಹಿಕವಾಗಿ ಸಶಕ್ತಗೊಳ್ಳುವ ಅಗತ್ಯವಿದೆ. ಮಹಿಳೆಯರ ಸುರಕ್ಷತೆಗೋಸ್ಕರ ಹಲವಾರು ಕಾನೂನುಗಳನ್ನು ಜಾರಿಗೊಳಿಸಲಾಗಿದೆ. ಆದರೆ ಈ ಕಾನೂನುಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲಾಗಿದೆ. ಕಾನೂನುಗಳನ್ನು ಯಾವುದೇ ಪಕ್ಷಪಾತವಿಲ್ಲದೆ ಸಮರ್ಪಕವಾಗಿ ಜಾರಿಗೆ ತರುವ ತನಕ ಮಹಿಳೆಯರ ವಿರುದ್ಧದ ಅಪರಾಧಗಳು ನಿರಂತರವಾಗಿ ನಡೆಯುತ್ತಿರುತ್ತವೆ. ಅಭಿವೃದ್ಧಿಯಲ್ಲಿ ರಾಜಕೀಯವನ್ನು ಮಾಡಬಾರದು. ಮಹಿಳೆಯರ ವಿರುದ್ಧದ ಸಾವಿರಾರು ಪ್ರಕರಣಗಳು ನ್ಯಾಯಾಲಯಗಳಲ್ಲಿ ಬಾಕಿ ಉಳಿದಿವೆ. ಎಷ್ಟು ಪ್ರಕರಣಗಳನ್ನು ಸಾಕ್ಷಾಧಾರಗಳ ಕೊರತೆಯಿಂದಾಗಿ ಕೈಬಿಡಲಾಗಿದೆ. ಅನೇಕ ಪ್ರಕರಣಗಳು ದೀರ್ಘಕಾಲ ನಡೆಯುತ್ತಿವೆ. ನಮ್ಮ ಕಾನೂನುಗಳಲ್ಲಿಯ ಕೆಲವೊಂದು ಲೋಪದೋಷಗಳಿಂದ ಆರೋಪಿಗಳು ಪಾರಾಗುತ್ತಿದ್ದಾರೆ ಅತ್ಯಾಚಾರಿಗಳಿಗೆ, ಕೊಲೆಗಡುಕರಿಗೆ ಮರಣ ದಂಡನೆಯನ್ನು ವಿಧಿಸಬೇಕು.

ಮಹಿಳೆಯರಿಗೆ ಶಿಕ್ಷಣ ಮತ್ತು ಆರೋಗ್ಯ ಸೌಲಭ್ಯಗಳು ಸುಲಭವಾಗಿ ದೊರೆಯಬೇಕು. ಪುರುಷರೊಂದಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ಕೊಡಬೇಕು. ಮಾಹಿತಿ ತಂತ್ರಜ್ಞಾನದ ಈ ಯುಗದಲ್ಲಿ ಸರಕಾರವು ಮಹಿಳೆಯರಿಗೆ ಉಚಿತ ಪ್ರಾಥಮಿಕ ಕಂಪ್ಯೂಟರ್ ತರಬೇತಿಯನ್ನು ಕೊಡಬೇಕು. ಒಳ್ಳೆಯ ಶಿಕ್ಷಣ ಮತ್ತು ಉತ್ತಮ ಉದ್ಯೋಗವಕಾಶಗಳು ಮಹಿಳೆಯರ ಮನೋಸ್ಥೈರ್ಯವನ್ನು ಹೆಚ್ಚಿಸುತ್ತದೆ. ಆರ್ಥಿಕ ವಾಗಿ ಹಿಂದುಳಿದ ಪ್ರತಿಭಾವಂತ ಹೆಣ್ಣು ಮಕ್ಕಳಿಗೆ ಶಿಷ್ಯವೇತನ ಕೊಡಬೇಕು. ಪದವಿಯವರಿಗೆ ಎಲ್ಲಾ ಹೆಣ್ಣು ಮಕ್ಕಳಿಗೆ ಉಚಿತ ಶಿಕ್ಷಣ ಕೊಡಬೇಕು.

ಭಾರತ ಸರ್ಕಾರವು 2001ನೇ ವರ್ಷವನ್ನು ಮಹಿಳಾ ಸಬಲೀಕರಣ ವರ್ಷ ಎಂದು ಘೋಷಿಸಿತ್ತು. ರಾಷ್ಟ್ರೀಯ ಮಹಿಳಾ ಸಬಲೀಕರಣ ರಾಜ್ಯ ನೀತಿಯು 2001ರಲ್ಲಿ ಜಾರಿಗೆ ಬಂದಿತು.

ಮಹಿಳೆಯರ ಅಭಿವೃದ್ಧಿ ಕಾರ್ಯಕ್ರಮಗಳು :

* ಸಾಂತ್ವನ ಕರ್ನಾಟಕ ಮಹಿಳಾ ಅಭಿವೃದ್ಧಿ ಯೋಜನೆ, ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯಗಳು, ಮಹಿಳೆಯರಿಗೆ ಆರ್ಥಿಕ ನೆರವು, ಸಾಮಾಜಿಕ ಪಿಡುಗುಗಳ ನಿವಾರಣೆಗಾಗಿ ವಿಶೇಷ ಘಟಕ, ಕೌಟುಂಬಿಕ ಹಿಂಸೆಯಿಂದ ಮಹಿಳೆಯರನ್ನು ರಕ್ಷಿಸುವ ಕಾಯ್ದೆ, ಸ್ವಾಧಾರ, ಸಾಂತ್ವನ, ದೌರ್ಜನ್ಯಕ್ಕೊಳಗಾದ ಮಹಿಳೆಗೆ ತಕ್ಷಣ ಆರ್ಥಿಕ ನೆರವು ಅವಶ್ಯಕತೆ ಇದ್ದಲ್ಲಿ 2000 ರೂಪಾಯಿಂದ ಗರಿಷ್ಠ 10,000 ರೂಪಾಯಿಗಳವರೆಗೆ ನೆರವು ನೀಡಲಾಗುವುದು.

ಪ್ರಸ್ತುತ ರಾಜ್ಯದಲ್ಲಿ ಒಟ್ಟು 172 ಸಾಂತ್ವನ ಕೇಂದ್ರಗಳು ಕಾರ್ಯನಿರತವಾಗಿವೆ. ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯಗಳಿವೆ.

ಒಟ್ಟಾರೆ ಮಹಿಳೆಯರ ಸರ್ವತೋಮುಖ ಅಭಿವೃದ್ಧಿಗೆ ಬೆನ್ನುಲುಬಾಗಿ ನಿಲ್ಲುವುದು ಪ್ರತಿಯೊಬ್ಬ ನಾಗರಿಕರ ಕರ್ತವ್ಯ. ಸಾಮಾಜಿಕ ಜವಾಬ್ದಾರಿಯಾಗಿದೆ. ಆಕೆಗೆ ಆತ್ಮಸ್ಥೈರ್ಯ ಮತ್ತು ತನನ್ನು ತಾನು ಕಾಪಾಡಿಕೊಳ್ಳುವ ಕಿತ್ತೂರು ರಾಣಿ, ಚೆನ್ನಮ್ಮ ಝಾನ್ಸಿ ರಾಣಿ, ಲಕ್ಷ್ಮೀಬಾಯಿಯಂತಹ ಈಗಿನ ಯುದ್ಧಕಲೆಗಳ ಅವಶ್ಯಕತೆ ಇದೆ. ಇಂತಹ ಕಾರ್ಯಕ್ರಮಗಳನ್ನು ಸರ್ಕಾರ ಹಾಕಿಕೊಳ್ಳುವುದು, ಮಹಿಳೆಯ ಆತ್ಮರಕ್ಷಣೆಯ ಯೋಜನೆ ರೂಪಿಸುವುದು ಸರ್ಕಾರದ ಕರ್ತವ್ಯವಾಗಿದೆ. ಇಂದಿನ ಮಹಿಳೆಯರು ತಮ್ಮ ಗುರುತು ಇತಿಹಾಸ ಪುಟಗಳಲ್ಲಿ ಸೇರುವಂತಾಗಬೇಕಾದರೆ ಯಾವ ತೊಂದರೆಗಳಿಗೆ ಹೆದರದೇ ಮುನ್ನುಗ್ಗಬೇಕು, ಇಲ್ಲಿ






Publisher, Editor, Printer & Owned by S.K.Gajendra Swamy, No-19, J.H. Patel Commercial Complex, Nehru Road, SHIVAMOGGA. 577201, mo: 94482 56183, 94481 70830, Printed at: Yogitha Printers, Vijaya Rice Mill